ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2020
ಬೆಲೆ ರೂ. 1



## ಅಕ್ಷರ ಬ್ರಹ್ಮನಿಗೆ ಅಕ್ಷರ ನಮನ


ಕೆ. ಭೋಜ ರಾವ್


ರಾಧಾ ಕೌಜಲಗಿ


ಡಾ. ನಿರಂಜನ್ ನಾಯ್ಕ್

## ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು

# ಸಂಘದಲ್ಲಿ ರಾಜ್ಯೋತ್ಸವ



ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಕರ್ನಾಟಕದ ಮೀನುಗಾರಿಕೆ, ಬಂದರು, ಒಳಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ಸನ್ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಿದರು.



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 29.11.2020ರಂದು ನಡೆದ ರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ನೀತಿ ಆಯೋಗದ ಉಪ ಕಾರ್ಯದರ್ಶಿ ಶೋಯೆಬ್ ಅಹಮ್ಮದ್ ಕಲಾಲ್ ಅವರಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ ಅವರು ಸ್ಮರಣಿಕೆ ನೀಡಿ ಗೌರವಿಸಿದರು.

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ

ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು

ಚಂದ್ರಶೇಖರ ಜೋಳದರಾಶಿ

ಎಸ್. ಕುಮಾರ್

ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ

ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು

ಡಾ. ಅವನೀಂದ್ರನಾಥ್ ರಾವ್

ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ

ಸಿ.ಎಂ. ನಾಗರಾಜ

ಕೋಶಾಧಿಕಾರಿ

ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು

ರಾಧಾಕೃಷ್ಣ

ಪೂಜಾ ರಾವ್

ಸಮಿತಿ ಸದಸ್ಯರು

ಡಾ. ಎಂ.ಎಸ್. ಶಶಿಕುಮಾರ್

ಶಿವಾನಂದ ಎಸ್. ಇಂಗಳೇಶ್ವರ

ಶ್ರೀನಾಥ್ ಎನ್.ಆರ್

ಸವಿತಾ ನೆಲ್ಲಿ

ಶಿವಪ್ಪ ಎಂ.

ಸಂತೋಷ ಜೆ.

ಶೋಭಾ ಗೌಡ

ಸುಮಿತಾ ಮುರಗೋಡ

ಆರ್. ರೇಣುಕುಮಾರ್

ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ

ಪಿ.ಎಸ್. ಶೆಟ್ಟಿ

ನಂದಿನಿ ಮಲ್ಯ

ಈಶ್ವರ ಮಡಿವಾಳ



ಸಂಪುಟ 31 । ಸಂಚಿಕೆ 3

ಡಿಸೆಂಬರ್ 2020


## ಸಂಪಾದಕೀಯ

# ಅಕ್ಷರ ಲೋಕದ ದಂತಕತೆ

ನಾಲ್ಕು ದಶಕಗಳ ಕಾಲ ಕನ್ನಡ ಪತ್ರಿಕಾರಂಗದಲ್ಲಿ ಅನುಪಮ ಸೇವೆ ಸಲ್ಲಿಸಿದ ಕನ್ನಡದ ಹಿರಿಯ ಪತ್ರಕರ್ತ, ಸಾಹಿತಿ ರವಿ ಬೆಳಗೆರೆ ಅವರು ನಮ್ಮನ್ನು ಅಗಲಿದ್ದಾರೆ. ಅವರ ಧೀಮಂತ ವ್ಯಕ್ತಿತ್ವವನ್ನು ಕೆಲವೇ ಸಾಲುಗಳಲ್ಲಿ ಹಿಡಿದಿಡುವುದು ಸಾಧ್ಯವಲ್ಲ. ಪತ್ರಕರ್ತರಾಗಿ, ಸಾಹಿತಿಯಾಗಿ, ನಿರೂಪಕ, ಕಲಾವಿದರಾಗಿ ಅವರ ಕೊಡುಗೆಗಳು ಅನನ್ಯ ಮತ್ತು ಅಜರಾಮರ. ರವಿ ಬೆಳಗೆರೆ ಕರ್ನಾಟಕದ ಬೆರಗು ಪ್ರತಿಭೆ.

ವೈಚಾರಿಕತೆ ಮತ್ತು ಸೃಜನಶೀಲತೆಯೊಂದಿಗೆ ತಮ್ಮ ದಿಟ್ಟತನದ ಬರಹಗಳಿಂದ ವಿಶಿಷ್ಟ ಲೇಖಕರಾಗಿ ರವಿ ಬೆಳಗೆರೆ ಕಾಣುತ್ತಾರೆ. ಅವರ ವೈವಿಧ್ಯಮಯ ಬರಹಗಳಂತೆ ಅವರ ವ್ಯಕ್ತಿತ್ವವೂ ವಿಭಿನ್ನ ಮತ್ತು ವರ್ಣರಂಜಿತ.

ಅವರ 'ಹಾಯ್ ಬೆಂಗಳೂರ್' ಪತ್ರಿಕೆಯಲ್ಲಿ ಬರುತ್ತಿದ್ದ ಸಮಾಜದ ಇನ್ನೊಂದು ಮುಖವಾದ 'ಕರಾಳತೆ'ಯನ್ನು ಟೀಕಿಸಿದವರು ಇದ್ದಾರೆ. ರವಿ ಬೆಳಗೆರೆ ಅವರ ಸಾವಿನ ನಂತರವೂ ಟೀಕಾ ತಜ್ಞರು ಮೂದಲಿಕೆಯ ಮಾತುಗಳನ್ನು ಆಡಿದ್ದಾರೆ. ಆದರೆ ಅವರಂತೆ ಸಮಾಜದ ಅಂಕು ಡೊಂಕುಗಳನ್ನು, ಭ್ರಷ್ಟಾಚಾರ, ಅನಾಚಾರಗಳನ್ನು ನಿರ್ಭೀತಿಯಿಂದ ಪ್ರಕಟಿಸುವ ಎದೆಗಾರಿಕೆ ಯಾರಿಗಿತ್ತು ಮತ್ತು ಯಾರಿಗಿದೆ?. ರಾಜಕೀಯ, ಸಿನಿಮಾರಂಗ, ಧಾರ್ಮಿಕ ರಂಗ ಸೇರಿದಂತೆ ಎಲ್ಲಾ ಗಣ್ಯಾತಿಗಣ್ಯರ ಇನ್ನೊಂದು ಮುಖವನ್ನು, ಸಣ್ಣತನಗಳನ್ನು ನಿಷ್ಠುರವಾದಿಯಾಗಿ ಬಯಲಿಗೆಳೆದ ಶ್ರೇಯಸ್ಸು ರವಿ ಬೆಳಗೆರೆಯವರಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಅವರದ್ದು ಆದರ್ಶಮಯ ಪತ್ರಿಕೋದ್ಯಮ.

ಸೃಜನಶೀಲ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಳು ಅಧ್ಯಯನ ಯೋಗ್ಯ. ಅವರ ಸಣ್ಣಕತೆಗಳು, ಕಾದಂಬರಿಗಳು ಮಾಸ್ತಿ, ಕಾರಂತರಂತಹ ಮೇರು ಸಾಹಿತಿಗಳ ಪ್ರಶಸ್ತಿಯ ಗೌರವ ಪಡೆದಿದೆ. ಅವರ 'ಎಂದೂ ಮರೆಯದ ಹಾಡು' ಟಿವಿ ನಿರೂಪಣೆಯ ಕಾರ್ಯಕ್ರಮ ನಾಡಿನಾದ್ಯಂತ ಜನರಲ್ಲಿ ಕಾವ್ಯ ಪ್ರೀತಿಯನ್ನು ಹೆಚ್ಚಿಸಿದೆ.

ಪತ್ರಿಕೆಯ ಮೂಲಕ ಅವರು ಬರೆಯುತ್ತಿದ್ದ 'ಖಾಸ್‌ಬಾತ್', 'ಬಾಟಂ ಐಟಂ' ಮೊದಲಾದ ಅಂಕಣ ಬರಹಗಳು ಜೀವನ ಪ್ರೀತಿಯೊಂದಿಗೆ ಓದುಗರಲ್ಲಿ ಓದುವ ಹವ್ಯಾಸವನ್ನು ಬೆಳೆಸಿದೆ. ಅಪಾರ ಓದುಗ ವಲಯವನ್ನು ಸೃಷ್ಟಿಸಿದೆ. ಅವರು ಪ್ರತಿ ವಾರವೂ ನಾಲ್ಕು ಅಂಕಣ ಬರಹಗಳಲ್ಲದೆ ಇತರ ಪತ್ರಿಕೆಗಳಲ್ಲೂ ಅಂಕಣಗಳನ್ನು ಬರೆಯುತ್ತಿದ್ದರು. ರವಿ ಬೆಳಗೆರೆ ಅವರು 'ಅಕ್ಷರ ಮಾಂತ್ರಿಕ', 'ಅಕ್ಷರ ಬ್ರಹ್ಮ' ಎನಿಸಿಕೊಂಡಿದ್ದು ಸಹಜ ಮತ್ತು ಅರ್ಥಪೂರ್ಣ.



ಕನ್ನಡ ಪತ್ರಿಕೋದ್ಯಮಕ್ಕೆ ವಿಭಿನ್ನ ಆಯಾಮ ನೀಡಿದ ಮತ್ತು ತಮ್ಮ ಸಾಹಿತ್ಯ, ನಿರೂಪಣೆಗಳಿಂದ ಸಾರಸ್ವತಲೋಕವನ್ನು ಬೆಳಗಿದ ರವಿ ಬೆಳಗೆರೆ ಅವರ ಕೊಡುಗೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಅಗತ್ಯವಿದೆ. ಪ್ರಾರ್ಥನಾ ಶಾಲೆಯನ್ನು ಕಟ್ಟಿ ಸಾವಿರಾರು ವಿದ್ಯಾರ್ಥಿಗಳಿಗೆ ಅವರು ವಿದ್ಯಾದಾನವನ್ನೂ ಮಾಡಿದ್ದಾರೆ.

ರವಿ ಬೆಳಗೆರೆ ಕರ್ನಾಟಕ ಕಂಡ ಅಕ್ಷರಲೋಕದ ದಂತಕತೆ. ಅವರ ಭೌತಿಕ ಶರೀರ ಇಲ್ಲವಾದರೂ ಅವರ ಅಕ್ಷರಗಳು ಅಜರಾಮರ. ಜಾತ್ಯಾತೀತತೆ ಮತ್ತು ಮಾನವೀಯ ಗುಣಗಳನ್ನು ಅಕ್ಷರಗಳಲ್ಲಿ ಮಾತ್ರವಲ್ಲ ಬದುಕಿನಲ್ಲೂ ಅಳವಡಿಸಿಕೊಂಡಿದ್ದ ಧೀಮಂತ ಚೇತನ ರವಿ ಬೆಳಗೆರೆ ಅವರಿಗೆ ಭಾವಪೂರ್ಣ ಅಕ್ಷರ ನಮನಗಳು.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 31 ಸಂಚಿಕೆ 3
ಡಿಸೆಂಬರ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ಜಾಲತಾಣದಿಂದ ಮೊಳಗಿದ ಕನ್ನಡ ಡಿಂಡಿಮ

ರಾಜ್ಯೋತ್ಸವದ ಸಂಭ್ರಮದ ತಿಂಗಳಾದ ನವೆಂಬರನ ಉದ್ದಕ್ಕೂ ದೆಹಲಿಯಲ್ಲಿ ಕೊರೊನಾ ಹಾವಳಿ ಏರುಮುಖದಲ್ಲಿದ್ದರೂ ದೆಹಲಿ ಕರ್ನಾಟಕ ಸಂಘದ ಅಡಿಯಲ್ಲಿ ನಾವು ಎಂದಿನ ವರ್ಷಗಳಂತೆ ವಾರವಾರವೂ ರಾಜ್ಯೋತ್ಸವವನ್ನು ಆಚರಿಸಿಕೊಂಡು ಬಂದೆವು. ಆದರೆ ಈ ಬಾರಿಯ ರಾಜ್ಯೋತ್ಸವದ ಪರಿಯೇ ಬೇರೆ ತರಹದಾಗಿತ್ತು. ಸಭಾಂಗಣದಲ್ಲಿರಬೇಕಾದವರೆಲ್ಲ ದೆಹಲಿಯ ತುಂಬ, ಕನ್ನಡ ಜಗತ್ತಿನ ತುಂಬ ಸಾವಿರಾರು ಸಹೃದಯರು ಜಾಲತಾಣ ನಿರ್ಮಿಸಿದ ಕಟಾಂಜನದೊಳಕ್ಕೆ ನಿಂತು ಕಾರ್ಯಕ್ರಮಗಳನ್ನು ತಮಗೆ ಬೇಕಾದ ರೀತಿಯಲ್ಲಿ ವೀಕ್ಷಿಸಿದರು.

ನವೆಂಬರ ಒಂದರ ಮುಂಜಾನೆ ಧ್ವಜಾರೋಹಣದ ಕಾರ್ಯಕ್ರಮದೊಂದಿಗೆ ಪ್ರಾರಂಭವಾಗಿ ಪ್ರತಿವಾರವೂ ನಾವು ಜಾಲತಾಣದ ಮೂಲಕ ಮತ್ತು ಫೇಸ್‌ಬುಕ್ ಲೈವ್‌ನ ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸಿದೆವು. ಎರಡನೇಯ ವಾರದಲ್ಲಿ ಪ್ರಸಿದ್ಧ ಡಾಕ್ಟರುಗಳಾದ ಡಾ. ಭೀಮಭಟ್ಟ ಮತ್ತು ಡಾ. ನಿರಂಜನ ನಾಯ್ಕ್‌ರವರೊಂದಿಗೆ ಕೊರೊನಾ ಕಾಲದಲ್ಲಿ ಮತ್ತು ಹೆಚ್ಚುತ್ತಿರುವ ವಾಯುಮಾಲಿನ್ಯದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಬಗ್ಗೆ ಜಾಲತಾಣದಲ್ಲಿ ಸಂವಾದವನ್ನು ಏರ್ಪಡಿಸಲಾಗಿತ್ತು. ನೂರಾರು ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡಿಗರು ಈ ಸಂವಾದ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸುಮಾರು ಎರಡು ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮ ಅದ್ಭುತವಾದ ಯಶಸ್ಸನ್ನು ಕಂಡಿತು. ಡಾ. ಭೀಮಭಟ್ಟರು ಮತ್ತು ಡಾ. ನಿರಂಜನ ನಾಯ್ಕ್‌ರವರು ದೆಹಲಿ ಕರ್ನಾಟಕ ಸಂಘದಲ್ಲಿ ಕಾಲಕಾಲಕ್ಕೂ ತಮ್ಮ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಿರುವುದನ್ನು ಇಲ್ಲಿ ಉಲ್ಲೇಖಿಸಬೇಕು. ಮೂರನೆಯ ವಾರದಲ್ಲಿ ನಮ್ಮನ್ನೆಲ್ಲ ಬಿಟ್ಟು ಅಗಲಿದ ಸುಪ್ರಸಿದ್ಧ ಚಲನಚಿತ್ರ ಗಾಯಕ ಡಾ. ಎಸ್.ಪಿ. ಬಾಲಸುಬ್ರಮಣ್ಯಂ ರವರಿಗೆ ದೆಹಲಿ ಕರ್ನಾಟಕ ಸಂಘದ ಸದಸ್ಯರಿಂದ ಅವರ ಹಾಡುಗಳನ್ನು ಹಾಡುವುದರ ಮೂಲಕ ನುಡಿನಮನವನ್ನು ಸಲ್ಲಿಸಿದೆವು. ಈ ಕಾರ್ಯಕ್ರಮದಲ್ಲೂ ಸಾವಿರಾರು ದೆಹಲಿ ಮತ್ತು ದೇಶದ/ವಿದೇಶಗಳ ವಿವಿಧ ಭಾಗಗಳಲ್ಲಿ ನೆಲೆಸಿದ ಕನ್ನಡಿಗರೆಲ್ಲರೂ ಭಾಗವಹಿಸಿದ್ದು ವಿಶೇಷವಾಗಿತ್ತು.

ಕೊನೆಯ ನಾಲ್ಕನೇಯ ವಾರದಲ್ಲಿ ಇಡೀ ತಿಂಗಳ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಸಮಾರೋಪದ ಲೇಪ. ಇದರಲ್ಲಿ ದೆಹಲಿಯ ಭಾಗದ ಮೂವರು ಕನ್ನಡಿಗರಿಗೆ 'ವಿಶಿಷ್ಟ' ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಅವರೆಂದರೆ, ಹಿರಿಯರಾದ ಶ್ರೀ ಭೋಜ ರಾವ್‌ರವರು, ಶ್ರೀಮತಿ ರಾಧಾ ಕೌಜಲಗಿಯವರು ಮತ್ತು ಡಾ. ನಿರಂಜನ ನಾಯ್ಕ್‌ರವರು. ಈ ಮೂವರ ಪರಿಚಯವನ್ನು ವಿವರವಾಗಿ ಈ ಅಭಿಮತದ ಸಂಚಿಕೆಯಲ್ಲಿ ಮಾಡಿಕೊಡಲಾಗಿದೆ. ಜೊತೆಗೆ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನೂ ನೀಡಲಾಯಿತು. ಈ ಸಂದರ್ಭದಲ್ಲಿ ಸಮಾರೋಪ ಭಾಷಣ ಮಾಡಲು ಕರ್ನಾಟಕ ರಾಜ್ಯದ ಮಾನ್ಯ ಮಂತ್ರಿಗಳಾದ ಕೋಟ ಶ್ರೀನಿವಾಸ ಪೂಜಾರಿಯವರು ಬಂದಿದ್ದು ನಮ್ಮ ಈ ಜಾಲತಾಣದ ಪ್ರಸರಣ ಕಾರ್ಯಕ್ರಮಕ್ಕೆ ಇನ್ನೊಂದು ಗರಿ ಇಟ್ಟಂತಾಯಿತು. ಅಂದಿನ ಸಂಜೆಯ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ದೆಹಲಿಯ ನೀತಿ ಆಯೋಗದಲ್ಲಿ ಉನ್ನತ ಅಧಿಕಾರಿಗಳಾಗಿರುವ ಶ್ರೀ ಶೋಯೆಬ್ ಅಹಮ್ಮದ್ ಕಲಾಲ್‌ರವರು ಬಂದು ವಿಶಿಷ್ಟ ಕನ್ನಡಿಗರನ್ನು ಸನ್ಮಾನಿಸುವುದರ ಜೊತೆಗೆ ಅವಶ್ಯಕತೆ ಮತ್ತು ಅರ್ಹತೆಗಳ ಆಧಾರದ ಮೇಲೆ ಸಂಘ ನೀಡುವ ಸುಮಾರು ಐದು ಲಕ್ಷಗಳಷ್ಟು ಮೊತ್ತದ ವಿದ್ಯಾರ್ಥಿ ವೇತನವನ್ನು ಮಕ್ಕಳಿಗೆ ವಿತರಿಸಿದರು. ಈ ಎಲ್ಲ ವಿವರಗಳನ್ನು ಅಭಿಮತದ ಸಂಚಿಕೆಯಲ್ಲಿ ವಿವರವಾಗಿ ನೀಡಲಾಗಿದೆ.

ಒಟ್ಟಾರೆ ರಾಜ್ಯೋತ್ಸವವನ್ನು ಈ ಕೊರೊನಾ ಕಾಲದ ಸಂಕಷ್ಟದ ಸಮಯದಲ್ಲಿ ಅರ್ಥಪೂರ್ಣವಾಗಿ ಆಚರಿಸುವ ಆಶಯ ನಮ್ಮದಾಗಿತ್ತು. ಆದಷ್ಟು ಮಕ್ಕಳಿಗೆ ಓದಲು ಸಂಘದ ಸಹಾಯ ಹಸ್ತವನ್ನು ಚಾಚುವ ಕೆಲಸವನ್ನು ನಾವು ಈ ಸಂದರ್ಭದಲ್ಲಿ ಮಾಡಲು ಸಾಧ್ಯವಾಗಿದ್ದು ನಮಗೆಲ್ಲ ಸಮಾಧಾನ ತಂದಿದೆ. ಇದಕ್ಕೆಲ್ಲ ತಮ್ಮ ಸಲಹೆ, ಸೂಚನೆ ಮತ್ತು ಬೆಂಬಲವನ್ನು ಸದಾ ನೀಡುತ್ತ ಬಂದಿರುವ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ ಮತ್ತು ಅವರನ್ನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಸಂಘ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಸುಮಾರು ಹದಿನೈದು ಲಕ್ಷಗಳ ಮೊತ್ತದ ಸ್ಮಾರ್ಟ್ ಬೋರ್ಡನ್ನು ನೀಡಲು ಒಪ್ಪಿಗೆ ನೀಡಿದ್ದನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕು.

ಕಾಲಕಾಲಕ್ಕೂ ಸಂಘ ಈ ಕೊರೊನಾ ಕಾಲದಲ್ಲಿ ತೊಂದರೆಗೆ ಸಿಲುಕಿಕೊಂಡವರಿಗೆ ಸಹಾಯ ಮಾಡಲು ತನ್ನ ಕಛೇರಿಯ ಬಾಗಿಲುಗಳನ್ನು ತೆರೆದಿಟ್ಟಿದೆ. ತನ್ನ ಸಹಾಯಹಸ್ತವನ್ನು ಅವರೆಲ್ಲರಿಗೂ ಕಳೆದ ಹತ್ತಾರು ತಿಂಗಳುಗಳಲ್ಲಿ ನೀಡುತ್ತ ಬಂದಿದೆ. ನಮ್ಮ ಸಂಘದ ಸಿಬ್ಬಂದಿಗಳನ್ನು ಸಹ ನಾವು ಮುತುವರ್ಜಿಯಿಂದ ನೋಡಿಕೊಳ್ಳುವ ಮತ್ತು ಅವರ ಬದುಕು ಸುಗಮವಾಗಿ ಸಾಗುವಂತೆ ನೋಡಿಕೊಳ್ಳುವ ಕಾರ್ಯವನ್ನು ನಾವು ಈ ಎಲ್ಲ ಹಣಕಾಸಿನ ಸಂಕಷ್ಟಗಳ ಕಾಲದಲ್ಲಿ ನಾವು ಮಾಡಿಕೊಂಡು ಬಂದಿದ್ದೇವೆ. ಸಂಘದ ಆವರಣದಲ್ಲಿರುವ ಬ್ಯಾಂಕು ಮತ್ತು ಕ್ಯಾಂಟೀನ್‌ನವರ ಅಹವಾಲುಗಳನ್ನು ಕಾಲಕಾಲಕ್ಕೂ ಮನ್ನಿಸಿ ಅವರಿಗೆ ಆದಷ್ಟು ರೀತಿಯಲ್ಲಿ ನೆರವಾಗುವ ಮತ್ತು ಬೇಕಾದ ಸವಲತ್ತುಗಳನ್ನು ನೀಡುವ ಕೆಲಸವನ್ನು ಸಂಘದ ಕಾರ್ಯಕಾರಿ ಸಮಿತಿ ತನ್ನ ಸಂವಿಧಾನದ ಮತ್ತು ಇತರ ಇತಿಮಿತಿಗಳಲ್ಲಿ ಮಾಡಲು ಒಪ್ಪಿಗೆ ನೀಡುತ್ತ ಬಂದಿದ್ದನ್ನು ನಾನು ಇಲ್ಲಿ ನಮೂದಿಸಬೇಕಾಗಿದೆ. ಇದು ಸುಲಭವಾದ ಕೆಲಸವಲ್ಲ. ಕಳೆದ ಒಂದೆರಡು ವರ್ಷಗಳಿಂದ ಬರದೆ ಬತ್ತಿ ಹೋಗುತ್ತಿರುವ ಸರಕಾರದ ಅನುದಾನಗಳು, ಕೊರೊನಾ ಲಾಕ್‌ಡೌನ್‌ನಿಂದಾಗಿ ಕ್ಷಣಿಸುತ್ತಿರುವ ಸಂಘದ ಆದಾಯಗಳು (ಆದರೆ ಎಂದಿನಂತೆ ಬರುತ್ತಿರುವ ಸರಕಾರದ ಕರ ಮತ್ತು ಅದಕ್ಕೆ ಕುರಿತಾದ ಬೇಡಿಕೆಗಳನ್ನು ಮನ್ನಿಸಬೇಕಾದ ಸಂದರ್ಭದಲ್ಲಿ) ಇವೆಲ್ಲವನ್ನು ನಾವು ತೂಗಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ನಮಗೆ ಮತ್ತು ನಿಮ್ಮ ಈ ಸಂಘಕ್ಕೆ ಸೃಷ್ಟಿಯಾಗಿದೆ.

ಕಳೆದ ಒಂದು ವರ್ಷದಿಂದ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸಂವಿಧಾನದ ರೀತ್ಯಾ ಕರೆಯುವುದರ ಬಗ್ಗೆ ನಾವು ಕಾಲಕಾಲಕ್ಕೂ ಚರ್ಚಿಸಿ ನಿರ್ಣಯವನ್ನು ತೆಗೆದುಕೊಂಡರೂ ಕೇಂದ್ರ ಮತ್ತು ರಾಜ್ಯ ಸರಕಾರಗಳ ಬಿಗಿಯಾದ ಕೋವಿಡ್ ನಿಯಮಾವಳಿಗಳ ಕಾರಣದಿಂದಾಗಿ ಅದು ಸಾಧ್ಯವೇ ಆಗಲಿಲ್ಲ. ಈ ಎಲ್ಲ ಸಮಸ್ಯೆಗಳನ್ನು ಮೀರಿ ನಿಲ್ಲಲು ನಾವು ಹೊಸ ಹಾದಿಗಳನ್ನು ಹುಡುಕಿಕೊಳ್ಳಬೇಕಾಗಿದೆ. ಆ ಕಾರಣಕ್ಕಾಗಿ ಈ ತಿಂಗಳ ಕೊನೆಯಲ್ಲಿ ಝೂಮ್ ಮೂಲಕ ನಮ್ಮ ಸಂಘದ ವಾರ್ಷಿಕ ಮಹಾಸಭೆಯನ್ನು ಕರೆಯುವುದರ ಬಗ್ಗೆ ಕಾರ್ಯಕಾರಿ ಸಮಿತಿ ನಿರ್ಧಾರ ತೆಗೆದುಕೊಂಡಿದೆ. ಈ ಕುರಿತಾದ ಎಲ್ಲ ವಿವರಗಳನ್ನು ಸಧ್ಯದಲ್ಲೆ ಸಂಘದ ಎಲ್ಲ ಸದಸ್ಯರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಸಂಘದ ಚರಿತ್ರೆಯಲ್ಲಿ ಮೊದಲ ಬಾರಿಗೆ ಈ ಬಗೆಯ ಜಾಲತಾಣದ ಮಹಾಸಭೆಯನ್ನು ನಾವು ಕರೆಯುತ್ತಿದ್ದೇವೆ. ತಾವೆಲ್ಲರೂ ಬಂದು ಈ ಸಭೆಯಲ್ಲಿ ಭಾಗವಹಿಸಿ ಈ ಕೊರೊನಾದ ಹಾವಳಿಯನ್ನು ಮೀರುವ ಸಾಧ್ಯತೆಗಳನ್ನು ನಿರ್ಮಿಸಬೇಕೆಂಬ ಕಳಕಳಿಯ ವಿನಂತಿ ನಮ್ಮದು.

***ಡಾ. ವೆಂಕಟಾಚಲ ಹೆಗಡೆ***
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ದೇಶದಾದ್ಯಂತ ಕೊರೊನ ಹಾವಳ ಕಡಿಮೆಯಾಗುತ್ತಾ ಬರುತ್ತಿದೆ. ಆದಷ್ಟು ಬೇಗನೆ ನಮಗೆ ಚುಚ್ಚುಮದ್ದು ಒದಗಿಸುವ ಭರವಸೆಯನ್ನು ಮಾನ್ಯ ಪ್ರಧಾನಮಂತ್ರಿಗಳು ನೀಡಿದ್ದಾರೆ. ಅಭಿನಂದನೆಗಳು. ಆದಷ್ಟು ಬೇಗನೆ ಈ ಮಾರಕ ರೋಗ ಕೊರೊನ ತೊಲಗಲಿ. ನಮ್ಮ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳು ಶುರುವಾಗಲೆಂದು ಕೋರುತ್ತೇನೆ.

ಕನ್ನಡ ಬಂಧುಗಳೇ, ಈ ಬಾರಿ ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಗಳನ್ನು ಪ್ರತಿ ವಾರ ಆಯೋಜನೆ ಮಾಡಿದ್ದು ಯಶಸ್ವಿಯಾಗಿದೆ. ಗಾನಗಂಧರ್ವ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಸಂಗೀತ ಗಾಯನ, ಡಾ. ಭೀಮ ಭಟ್, ಡಾ. ನಿರಂಜನ್ ನಾಯ್ಕ್‌ರವರ ಆರೋಗ್ಯವನ್ನು ಕುರಿತು ಉಪನ್ಯಾಸ, ಆರೋಗ್ಯ ದೃಷ್ಟಿಯಿಂದ ಗೂಗಲ್ ಫಿಟ್ ಅತೀ ಹೆಚ್ಚು ಕಾಲ್ನಡಿಗೆ, ವಿಶೇಷವಾಗಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡುವ ಸಂದರ್ಭದಲ್ಲಿ ನೃತ್ಯ ಕಾರ್ಯಕ್ರಮ ನಮ್ಮ ಸ್ಥಳೀಯ ಕಲಾವಿದರಿಂದ ಆಗಿರುವ ಈ ಎಲ್ಲವೂ ಫೇಸ್ ಬುಕ್ ಲೈವ್ ಮುಖಾಂತರ ಅತ್ಯುತ್ತಮವಾಗಿ ಜರುಗಿದೆ. ಯಶಸ್ವಿಯಾಗಿದೆ. ಲೈವ್ ಕಾರ್ಯಕ್ರಮ ವೀಕ್ಷಿಸಿದ ಮೂರೂವರೆ ಸಾವಿರ ಜನಕ್ಕಿಂತಲೂ ಹೆಚ್ಚು ಕನ್ನಡಿಗರು ದೇಶವಿದೇಶಗಳಿಂದ ವೀಕ್ಷಿಸಿ ಕಾರ್ಯಕ್ರಮ ಯಶಸ್ವಿಯಾಗಿ ಮಾಡಿದ್ದಾರೆ. ಇಂತಹ ಕಾರ್ಯಕ್ರಮಗಳು ಇನ್ನೂ ಜರಗಬೇಕೆಂದು ಸಾಹಿತಿಗಳು, ಕಲಾವಿದರು ಎಲ್ಲರೂ ಪ್ರೇರಣೆ ನೀಡಿದ್ದಾರೆ.

ಈ ಬಾರಿ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ೯೦ ವರ್ಷದ ಹಿರಿಯ ಕೆ. ಭೋಜ ರಾವ್ ಅವರು ೧೯೯೦ ರಿಂದ ತೊಡಗಿ ನಿರಂತರ ಮೂರು ದಶಕಗಳಿಂದ ನವದೆಹಲಿಯ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಯಾವುದೇ ಸಂಭಾವನೆ ಪಡೆಯದೆ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಡಾ. ನಿರಂಜನ ನಾಯ್ಕ್ ಅವರು ದೆಹಲಿ ಕರ್ನಾಟಕ ಸಂಘದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಸಂಘದಲ್ಲಿ ಉಚಿತವಾಗಿ ವೈದ್ಯಕೀಯ ಸಲಹೆಗಳನ್ನು ನೀಡಿದ್ದಾರೆ. ಶ್ರೀಮತಿ ರಾಧಾ ಕೌಜಲಗಿಯವರು ಕಲಾವಿದೆಯಾಗಿ ರಾಜಧಾನಿಯ ಕನ್ನಡಪರ ಸಂಘಟನೆಗಳಲ್ಲಿ ಸಂಘಟಕಿಯಾಗಿ ಸಾಮಾಜಿಕ ಹಾಗೂ ಮಹಿಳಾಪರ ಚಟುವಟಿಕೆಯಲ್ಲೂ ತೊಡಗಿಸಿಕೊಂಡವರು. ಈ ಮೂವರು ಮಹನೀಯರಿಗೆ ಮತ್ತೊಮ್ಮೆ ಅಭಿನಂದನೆಗಳು.

ಇದೇ ತಿಂಗಳ ಡಿಸೆಂಬರ್‌ನಲ್ಲೂ ಸಾಹಿತಿ ಪದ್ಮಶ್ರೀ ಡಾ. ದೊಡ್ಡ ರಂಗೇಗೌಡರವರ ಸಾಹಿತ್ಯದ ಹಾಡುಗಳನ್ನು ಸ್ಥಳೀಯ ಕಲಾವಿದರಿಂದ ಹಮ್ಮಿಕೊಳ್ಳಲಾಗುತ್ತಿದೆ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ ಬಂದು ವರ್ಷಗಳು ಕಳೆದಿವೆ. ೨೦೨೦ರ ಜನವರಿಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಮಾಡಬೇಕಿತ್ತು. ಕೊರೊನಾ ಕಾರಣಕ್ಕಾಗಿ ಇದನ್ನು ಮಾಡಲು ಸಾಧ್ಯವಾಗಲಿಲ್ಲ. ಈಗಲೂ ಸಹ ದೆಹಲಿಯ ಕಾನೂನು ತೊಡಕುಗಳು ಇರುವ ಕಾರಣ ಇನ್ನೂರರಿಂದ ಕೇವಲ ಐವತ್ತು ಜನರು ಸೇರಲು ಅವಕಾಶ ಇರುವ ಕಾರಣ ನಾವು ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ ೦೩.೦೧.೨೦೨೧ ರಂದು ಝೂಮ್ ಆ್ಯಪ್‌ನಲ್ಲಿ ಸಭೆಯನ್ನು ಆಯೋಜಿಸಿದ್ದೇವೆ. ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಪಾಲ್ಗೊಳ್ಳಬೇಕೆಂದು ತಮ್ಮೆಲ್ಲರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಧನ್ಯವಾದಗಳು.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ಸ್ಥಳೀಯ ಕಲಾವಿದರಿಂದ**
**ಡಾ. ದೊಡ್ಡರಂಗೇಗೌಡರ ಸಾಹಿತ್ಯದ 'ಗೀತ ಗಾಯನ'**
**(ದಿನಾಂಕ ಮತ್ತು ಸಮಯವನ್ನು ಸದ್ಯದಲ್ಲಿಯೇ ತಿಳಿಸಲಾಗುವುದು)**

**ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ**
**ದಿನಾಂಕ 03.01.2021 ಬೆಳಗ್ಗೆ : 11.00 ಗಂಟೆಗೆ**
**ಝೂಮ್ ಆ್ಯಪ್‌ನಲ್ಲಿ**

## ಸಂಘದಿಂದ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಕೆ



ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಈಚೆಗೆ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿಯವರ ಕಾರ್ಯದರ್ಶಿ ಗಿರೀಶ್ ಹೊಸೂರು ಅವರಿಗೆ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು.

## ಸಂಘದಲ್ಲಿ ರಾಜ್ಯೋತ್ಸವ

# ಮುಂಜಾಗ್ರತೆಯೇ ಮದ್ದು

## ಕೊರೊನಾ ಕುರಿತ ವೈದ್ಯಕೀಯ ಸಲಹಾ ಕಾರ್ಯಕ್ರಮದಲ್ಲಿ ವೈದ್ಯರು

ದೆಹಲಿಯಲ್ಲಿ ಚಳಿಗಾಲದ ಹವಾಮಾನ ಮತ್ತು ವಾಯುಮಾಲಿನ್ಯದ ಹಿನ್ನಲೆಯಲ್ಲಿ ದೆಹಲಿ ಕರ್ನಾಟಕ ಸಂಘವು ವೈದ್ಯಕೀಯ ಸಲಹಾ ಕಾರ್ಯಕ್ರಮವನ್ನು ದಿನಾಂಕ 08.11.2020ರಂದು ಅಂತರ್ಜಾಲದ ಮೂಲಕ ಆಯೋಜಿಸಿತ್ತು.

ದೆಹಲಿಯ ವಿಪರೀತ ಚಳಿಯ ವಾತಾವರಣ ಮತ್ತು ವಾಯುಮಾಲಿನ್ಯದೊಂದಿಗೆ ಕೊರೊನಾ ವೈರಾಣುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವ ಕುರಿತ ಖ್ಯಾತ ಆಯುರ್ವೇದ ತಜ್ಞ ಡಾ. ಭೀಮ ಭಟ್ ಮತ್ತು ಹೆಸರಾಂತ ಕ್ಯಾನ್ಸರ್ ತಜ್ಞ ಡಾ. ನಿರಂಜನ ನಾಯ್ಕ್ ಉಪಯುಕ್ತ ಸಲಹೆಗಳನ್ನು ನೀಡಿದರು.

ರೋಗ ಬಾರದಂತೆ ಮುಂಜಾಗ್ರತೆ ವಹಿಸುವುದೇ ಕಾಯಿಲೆಗೆ ಮದ್ದು ಎಂದವರು ಅಭಿಪ್ರಾಯಪಟ್ಟರು. ರೋಗವನ್ನು ಆರಂಭದಿಂದಲೇ ಮೆಟ್ಟಿ ನಿಲ್ಲಬೇಕು. ಸಮತೋಲನ ಆಹಾರ ಮತ್ತು ವ್ಯಾಯಾಮ ಜೀವನದಲ್ಲಿ ಅಳವಡಿಸಿಕೊಳ್ಳಲು ಅವರು ಸಲಹೆ ನೀಡಿದರು.

ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

ಈ ಕಾರ್ಯಕ್ರಮವನ್ನು ಝೂಮ್ ಮೀಟಿಂಗ್ ಅಂತರ್ಜಾಲ ವೇದಿಕೆಯ ಮೂಲಕ ಆಯೋಜಿಸಲಾಗಿತ್ತು.

ಅದೇ ದಿನ ಸಂಘವು ಆಯೋಜಿಸಿದ 'ಆರೋಗ್ಯ ಫಿಟ್‌ನೆಸ್' ಸ್ಪರ್ಧೆಯಲ್ಲಿ ಭಾಗವಹಿಸಿ ಈ ಕೆಳಗಿನ ದೆಹಲಿ ಕನ್ನಡಿಗರು ವಿಜೇತರಾದರು.

**ಮೊದಲ ಬಹುಮಾನ**–ಅನನ್ಯ ಎನ್., ವಿನೋದ್ ಕೈಕಾಡೆ, ಲಕ್ಷ್ಯ ಎನ್., ಜಿ.ಬಿ. ರಾಜ್‌ಕುಮಾರ್, ಸಿ.ಎಂ. ನಾಗರಾಜ



ಡಾ. ಭೀಮ್ ಭಟ್



ಡಾ. ನಿರಂಜನ್ ನಾಯ್ಕ್

**ದ್ವಿತೀಯ ಬಹುಮಾನ**–ಚಂದ್ರಶೇಖರ ಜೋಳದರಾಶಿ, ಶಿವರಾಮ ರೈ., ಸುರೇಶ್ ಆಚಾರ್ಯ, ವೀನಾ ಕೊಟ್ಟಾರಿ., ಶ್ರೀಲಕ್ಷ್ಮೀ ಚಂದ್ರಶೇಖರ

**ತೃತೀಯ ಬಹುಮಾನ**–ಮೋಹನ್ ಕುಮಾರ್, ಈಶ್ವರಲಿಂಗ ಅರೇರಾ, ಶಿವಪ್ಪ ಎಂ., ವಿಜಯ್ ಕುಮಾರ್ ಮತ್ತು ಸುಜಾತ ಆಚಾರ್ಯ

# ವಿದ್ಯಾರ್ಥಿ ವೇತನ ವಿತರಣೆ




ದೆಹಲಿ ಕರ್ನಾಟಕ ಸಂಘ ದಿನಾಂಕ 29.11.2020ರಂದು ಆಯೋಜಿಸಿದ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಸನ್ಮಾನ್ಯ ಸಚಿವ ಕೋಟ ಶ್ರೀನಿವಾಸ ಪೂಜಾರಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

**ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿವೇತನ ಪಡೆದವರು**

ಅರ್ಹತೆ ಆಧಾರದ ಮೇಲೆ ಅಕ್ಷತಾ ಹಲ್ಕರ್ (2ನೇ ತರಗತಿ), ಕೀರ್ತನ್ ಪಿ (3ನೇ ತರಗತಿ), ಸನಾ ಮಷಿತ (4ನೇ ತರಗತಿ), ಸಾತ್ವಿಕ್ ಎಚ್. ತೇಲಿ (5ನೇ ತರಗತಿ), ನಿಕ್ಷಿತ್ (6ನೇ ತರಗತಿ)ಅವರು ದೆಹಲಿ ಕರ್ನಾಟಕ ಸಂಘದ ವಿದ್ಯಾರ್ಥಿವೇತನ ಪಡೆದರು.

ದಿ. ಶ್ರೀ ನರಹರಿ ರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಸರ್ಗ(7ನೇ ತರಗತಿ), ದಿ. ಡಾ. ವಿಕೆಆರ್‌ವಿ. ರಾವ್ ಸ್ಮಾರಕ ವಿದ್ಯಾರ್ಥಿ ವೇತನ ಶ್ರೇಯಾ ಎಚ್. ತೇಲಿ (9ನೇ ತರಗತಿ), ದಿ. ಶ್ರೀ ಎ.ಪಿ. ಕುಮಟಾಕರ್ ಸ್ಮಾರಕ ವಿದ್ಯಾರ್ಥಿ ವೇತನ ಪ್ರಗ್ಯಾ ಶ್ರೀಕಾಂತ್ ಪೈ (10ನೇ ತರಗತಿ), ದಿ. ಶ್ರೀ ಎ.ವಿ. ಪೈ. ಸ್ಮಾರಕ ವಿದ್ಯಾರ್ಥಿ ವೇತನ ಕ್ಷಿತಿಜ್ ಎಸ್(11ನೇ ತರಗತಿ), ದಿ. ಶ್ರೀ ರಾಘವನ್ ಸ್ಮಾರಕ ವಿದ್ಯಾರ್ಥಿ ವೇತನ ಮಹೇಶ್ ಆರ್ (12ನೇ ತರಗತಿ), ದಿ. ಶ್ರೀ ಜಿ.ವೈ. ಕೃಷ್ಣನ್ ಸ್ಮಾರಕ ವಿದ್ಯಾರ್ಥಿ ವೇತನ ಪೂಜಾ ಜೆ (ಪದವಿ), ದಿ. ಶ್ರೀ ಗೋಪಾಲ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿ ವೇತನ ನವಯುಗ್ ಶ್ರೀರಾಮ್ (ಇಂಜಿನಿಯರಿಂಗ್), ದಿ. ಶ್ರೀ ಐ. ರಾಮಮೋಹನ ರಾವ್ ಸ್ಮಾರಕ ವಿದ್ಯಾರ್ಥಿ ವೇತನ ಮಹೇಶ್‌ಕುಮಾರ್ ಶಾಂತಕುಮಾರ್ ನಿಂಬಾಳ್ (ಇಂಜಿನಿಯರಿಂಗ್) ದಿ. ಶ್ರೀ ಕೃಷ್ಣಮೂರ್ತಿ ರಾವ್ ಸ್ಮಾರಕ ವಿದ್ಯಾರ್ಥಿ ವೇತನ ಸಿ. ಪುನೀತ್(ಇಂಜಿನಿಯರಿಂಗ್) ಅವರಿಗೆ ನೀಡಲಾಯಿತು.

ದಿ. ಶ್ರೀ ಈಶ್ವರಪ್ಪ ಮುರಗೋಡ ಮತ್ತು ದಿ. ಶ್ರೀ ಕೃಷ್ಣಮೂರ್ತಿ ರಾವ್ ಸ್ಮಾರಕ ವಿದ್ಯಾರ್ಥಿ ವೇತವನ್ನು 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕನ್ನಡದ ವಿದ್ಯಾರ್ಥಿನಿ ಆರತಿ ಬಿರಾದಾರ ಅವರಿಗೆ ನೀಡಲಾಗುತ್ತಿದೆ.

38 ವಿದ್ಯಾರ್ಥಿಗಳಿಗೆ ಅವಶ್ಯಕತೆ ಆಧಾರದ ಮೇಲೆ ವಿದ್ಯಾರ್ಥಿವೇತನ ನೀಡಲಾಯಿತು. ಖಜಾಂಚಿ ಆಶಾಲತಾ ಎಂ. ವಿದ್ಯಾರ್ಥಿ ವೇತನ ವಿತರಿಸಲು ಸಹಕರಿಸಿದರು.

# ಗಾಯನ ಕ್ಷೇತ್ರಕ್ಕೆ ಎಸ್.ಪಿ.ಬಿ. ಕೊಡುಗೆ ಅನನ್ಯ

## ಸಂಗೀತ ಸಂಜೆಯಲ್ಲಿ ಡಾ. ವೆಂಕಟಾಚಲ ಹೆಗಡೆ

ಕನ್ನಡ ಸೇರಿದಂತೆ ದಕ್ಷಿಣ ಭಾರತ ಮತ್ತು ಭಾರತದ 16 ಭಾಷೆಗಳಲ್ಲಿ ಗಾಯಕರಾಗಿ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಗಾಯನ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಹೇಳಿದ್ದಾರೆ.

ಅವರು ದಿನಾಂಕ 08.11.2020ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ನುಡಿನಮನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಇತ್ತೀಚೆಗೆ ಅಗಲಿದ ಎಸ್.ಪಿ. ಬಾಲಸುಬ್ರಹ್ಮಣ್ಯಂ ನೆನಪಿನಾರ್ಥ ದೆಹಲಿಯ ಸ್ಥಳೀಯ ಕಲಾವಿದರು ಸೇರಿ ಈ ಸಂಗೀತ ಸಂಜೆಯನ್ನು ಪ್ರಸ್ತುತಪಡಿಸುವ ಮೂಲಕ ಮೇರು ಗಾಯಕನಿಗೆ ಅರ್ಥಪೂರ್ಣವಾಗಿ ಗೌರವ ಸಲ್ಲಿಸಿದ್ದಾರೆ ಎಂದು ಶ್ಲಾಘಿಸಿದರು.

ನಂತರ ನಡೆದ ಸಂಗೀತ ಸಂಜೆಯಲ್ಲಿ ದೆಹಲಿಯ ಕಲಾವಿದರು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿದ್ದ ಸುಮಧುರ ಕನ್ನಡ ಗೀತೆಗಳನ್ನು ಹಾಡಿ ರಂಜಿಸಿದರು.

ಗಿರೀಶ್ ಎಸ್., ಎಸ್. ಕುಮಾರ, ಗಂಗಾಧರ, ರಾಜ್‌ಕುಮಾರ್, ಎ.ಟಿ. ಶ್ರೀನಿವಾಸ, ಅಶೋಕ್ ಹನಮ್‌ಸಾಗರ್, ಶ್ರೀಮತಿ ಮಮತಾ ಶಿವರಾಮ್, ಶ್ರೀಮತಿ ನೇತ್ರಾಕುಮಾರ್, ಶ್ರೀಮತಿ ಶುಭಾದೇವಿ ಪ್ರಸಾದ್, ಕು. ಪೂರ್ಣಿಮಾ ಅಡಿಗ, ಶ್ರೀಮತಿ ಪ್ರೇರಣಾ ವೆಂಕಟೇಶ್ ಮೊದಲಾದವರು ವೈವಿಧ್ಯಮಯ ಹಾಡುಗಳನ್ನು ಹಾಡಿ ಮೆಚ್ಚುಗೆ ಗಳಿಸಿದರು.


ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿ ವಂದಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು.

ಈ ಕಾರ್ಯಕ್ರಮವನ್ನು ಫೇಸ್‌ಬುಕ್ ಲೈವ್ ನೇರಪ್ರಸಾರ ವೇದಿಕೆಯ ಮೂಲಕ ಆಯೋಜಿಸಲಾಗಿತ್ತು.













# ಕನ್ನಡದ ಘನತೆ ಎತ್ತಿ ಹಿಡಿಯುವ ಶಕ್ತಿ ಕನ್ನಡಿಗರಲ್ಲಿದೆ

## ಸಂಘದ ರಾಜ್ಯೋತ್ಸವ ಸಮಾರಂಭದಲ್ಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ




ಕನ್ನಡದ ಘನತೆಯನ್ನು ಎತ್ತಿ ಹಿಡಿಯುವ ಶಕ್ತಿ ಕನ್ನಡಿಗರಲ್ಲಿದೆ ಎಂದು ಕರ್ನಾಟಕದ ಮೀನುಗಾರಿಕೆ, ಬಂದರು, ಒಳಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ಸನ್ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಅವರು ದಿನಾಂಕ 29.11.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ವೈವಿಧ್ಯಮಯ ಕನ್ನಡ ಭಾಷೆ ಮತ್ತು ಪರಂಪರೆಯನ್ನು ಕನ್ನಡಿಗರು ಹೊಂದಿದ್ದಾರೆ. ದೆಹಲಿ ಕನ್ನಡಿಗರು 1948 ರಿಂದಲೇ ಈ ಪರಂಪರೆಯನ್ನು ಎತ್ತಿ ಹಿಡಿಯುತ್ತಾ ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಮುನ್ನಡೆಸಿದ್ದಾರೆ ಎಂದು ಸಚಿವರು ಶ್ಲಾಘಿಸಿದರು. ಅವರು ಈ ಸಂದರ್ಭದಲ್ಲಿ ತಮ್ಮ ಮಿತ್ರ, ಪತ್ರಕರ್ತ ದಿ. ರಘುರಾಮ ಶೆಟ್ಟರ ಸ್ಫುಟವಾದ ಕನ್ನಡ ಮತ್ತು ಸಾಹಿತಿ ದಿ. ಕೋಟ ಶಿವರಾಮ ಕಾರಂತರ ಲೇಖನಿಯ ಶಕ್ತಿಯನ್ನೂ ಸ್ಮರಿಸಿದರು.

ದೆಹಲಿ ಕರ್ನಾಟಕ ಸಂಘ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನವನ್ನು ಸಚಿವರು ವಿತರಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ನಾಡುನುಡಿಗೆ ಸೇವೆ ಸಲ್ಲಿಸಿದ ದೆಹಲಿಯ ಕನ್ನಡ ಸಾಧಕರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಖ್ಯಾತ ಕ್ಯಾನ್ಸರ್ ತಜ್ಞ ಡಾ. ನಿರಂಜನ ನಾಯ್ಕ್ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಬಾರಿ ಈ ಗೌರವಕ್ಕೆ ಆಯ್ಕೆಯಾಗಿದ್ದ ಮೂವರು ಮಹನೀಯರಲ್ಲಿ ಹಿರಿಯ ಲೆಕ್ಕ ಪರಿಶೋಧಕ ಕೆ. ಭೋಜ ರಾವ್ ಮತ್ತು ರಂಗ ಕಲಾವಿದೆ ಶ್ರೀಮತಿ ರಾಧಾ ಕೌಜಲಗಿ ಅವರು ಕಾರಣಾಂತರಗಳಿಂದ ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಅವರಿಗೆ ಮುಂದಿನ ದಿನಗಳಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ನೀತಿ ಆಯೋಗದಲ್ಲಿ ಉಪ ಕಾರ್ಯದರ್ಶಿಯಾಗಿರುವ ಶೋಯೆಬ್ ಅಹಮ್ಮದ್ ಕಲಾಲ್, ಐ.ಇ.ಎಸ್., ಅವರು ಪ್ರಶಸ್ತಿ ಪ್ರದಾನ ಮಾಡಿ ಸಾಧಕರನ್ನು ಅಭಿನಂದಿಸಿ ಮಾತನಾಡಿದರು.

ಡಾ. ನಿರಂಜನ ನಾಯ್ಕ್ ಅವರು ಪ್ರಶಸ್ತಿ ನೀಡಿದ ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು. ಅವರು ಕೊರೊನಾ ಮಹಾಮಾರಿಯ ಕುರಿತು ಮುಂಜಾಗ್ರತೆವಹಿಸುವಂತೆ ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ



**ಕೋಟ ಶ್ರೀನಿವಾಸ ಪೂಜಾರಿ**

ಅವರು ಮಾತನಾಡಿ, ಕೋವಿಡ್ ಕಾಲದಲ್ಲೂ ಸಂಘ ರಾಜ್ಯೋತ್ಸವ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಿದೆ ಎಂದರು. ಸಂಘವನ್ನು ಸದಾ ಚಟುವಟಿಕೆಯಲ್ಲಿ ಇರುವಂತೆ ನೋಡಿಕೊಂಡ ಕಾರ್ಯಕಾರಿ ಸಮಿತಿ ಮತ್ತು ಕಲಾವಿದರೆಲ್ಲರನ್ನು ಅವರು ಶ್ಲಾಘಿಸಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ವಂದಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ನಂತರ ದೆಹಲಿಯ ಸ್ಥಳೀಯ ಕಲಾವಿದರು ಪ್ರಸ್ತುತಪಡಿಸಿದ ವೈವಿಧ್ಯಮಯ ನೃತ್ಯ ಕಾರ್ಯಕ್ರಮ ಅಪಾರ ಮೆಚ್ಚುಗೆ ಗಳಿಸಿತು.

ಈ ಕಾರ್ಯಕ್ರಮವನ್ನು ಫೇಸ್‌ಬುಕ್ ಲೈವ್ ನೇರಪ್ರಸಾರ ವೇದಿಕೆಯ ಮೂಲಕ ಆಯೋಜಿಸಲಾಗಿತ್ತು.

# ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ




ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 29.11.2020ರಂದು ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಖ್ಯಾತ ಕ್ಯಾನ್ಸರ್ ತಜ್ಞ ಡಾ. ನಿರಂಜನ್ ನಾಯ್ಕ್ ಅವರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ದೆಹಲಿಯ ನೀತಿ ಆಯೋಗದಲ್ಲಿ ಉಪ ಕಾರ್ಯದರ್ಶಿಯಾಗಿರುವ ಶೋಯೆಬ್ ಅಹಮ್ಮದ್ ಕಲಾಲ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಖಜಾಂಚಿ ಶ್ರೀಮತಿ ಆಶಾಲತಾ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಶೋಭಾ ಗೌಡ ಮೊದಲಾದವರು ಉಪಸ್ಥಿತರಿದ್ದರು.

# ವೈವಿಧ್ಯಮಯ ನೃತ್ಯ ಪ್ರದರ್ಶನ















ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 29.11.2020ರಂದು ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಸ್ಥಳೀಯ ದೆಹಲಿಯ ಕಲಾವಿದರು ವೈವಿಧ್ಯಮಯ ನೃತ್ಯ ಪ್ರದರ್ಶನ ನೀಡಿದರು. ಕು. ಸಪ್ನಾ ಅತ್ತಾವರ್, ಕು. ಗೀತಾಂಜಲಿ, ಕು. ಸಿಂಚನಾ ಮೂರ್ತಿ, ಕು. ರಮ್ಯ ಎಂ.ಎಸ್., ಶ್ರೀಮತಿ ಸವಿತಾ ನೆಲ್ಲಿ ಮತ್ತು ಅಕ್ಷತಾ ರಾವ್ ಅವರು ಅಪೂರ್ವ ನೃತ್ಯ ಪ್ರದರ್ಶನದ ಮೂಲಕ ಮೆಚ್ಚುಗೆ ಗಳಿಸಿದರು.

# ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು

**ದೆಹಲಿ ಕರ್ನಾಟಕ ಸಂಘವು ಪ್ರತೀ ವರ್ಷ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಈ ಸಾಧಕರನ್ನು ನವೆಂಬರ್ ತಿಂಗಳು ನಡೆಯುವ ರಾಜ್ಯೋತ್ಸವ ಸಂದರ್ಭದಲ್ಲಿ ಅಭಿನಂದಿಸಲಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಅತ್ಯುನ್ನತ ಸಾಧನೆ ಮಾಡುತ್ತಲೇ ತಮ್ಮ ನಾಡುನುಡಿಗೂ ಕೊಡುಗೆಗಳನ್ನು ನೀಡುವ ಕನ್ನಡಿಗರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಈ ಬಾರಿ 2020ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಭಾಜನರಾದ ಶ್ರೀ ಕೆ. ಭೋಜ ರಾವ್, ಡಾ. ನಿರಂಜನ ನಾಯ್ಕ್ ಮತ್ತು ಶ್ರೀಮತಿ ರಾಧಾ ಕೌಜಲಗಿ ಅವರು ವಿಭಿನ್ನ ಸಾಧನೆಗಳನ್ನು ಮಾಡಿ ಸಂಘದ ಗೌರವಕ್ಕೆ ಪಾತ್ರರಾಗಿದ್ದಾರೆ.**

## ಲೆಕ್ಕಪರಿಶೋಧಕ ಕೆ. ಭೋಜರಾವ್

ಮಂಗಳೂರಿನ ಕಡಂದಲೆಯವರಾದ ಕೆ. ಭೋಜರಾವ್ ಬೆಳೆದದ್ದು ಮಂಗಳೂರು ಸಮೀಪದ ಪಾಣೆಮಂಗಳೂರಿನ ಸುಧೇಕಾರ್‌ನಲ್ಲಿ. ಆರಂಭಿಕ ಶಿಕ್ಷಣವನ್ನು ಮಂಗಳೂರು, ಕಲ್ಲಡ್ಕ ಮತ್ತು ಬಂಟ್ವಾಳದ ಎಸ್.ವಿ.ಎಸ್. ಹೈಸ್ಕೂಲ್‌ನಲ್ಲಿ ಪಡೆದರು.

ಮಂಗಳೂರಿನ ಸರ್ಕಾರಿ ಕಾಲೇಜಿನಿಂದ 1952ರಲ್ಲಿ ಬಿ.ಕಾಂ. ಪದವಿಯನ್ನು ಪಡೆದರು. 1955ರಲ್ಲಿ ಮದ್ರಾಸ್‌ನಲ್ಲಿ ಚಾರ್ಟೆರ್ಡ್ ಅಕೌಂಟೆಂಟ್ ಪರೀಕ್ಷೆ ಬರೆದು ಉತ್ತೀರ್ಣರಾದರು.



ಮುಂಬೈಯ ವೆಸ್ಟರ್ನ್ ರೈಲ್ವೇಯಲ್ಲಿ 1957ರಲ್ಲಿ ಡಿವಿಶನಲ್ ಅಕೌಂಟೆಂಟ್ ಆಗಿ ಕಾರ್ಯ ನಿರ್ವಹಿಸಿದರು. ಬಳಿಕ ಲೈಫ್ ಇನ್ಸೂರೆನ್ಸ್ ಕಾರ್ಪೋರೇಷನ್‌ನ ಕೇಂದ್ರ ಕಚೇರಿಯಲ್ಲಿ ಸುಮಾರು ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ದೆಹಲಿಯ ಅಸ್ಬೆಸ್ಟೋಸ್ ಕಂಪನಿಯಲ್ಲಿ ಮುಖ್ಯ ವಾಣಿಜ್ಯ ಅಧಿಕಾರಿಯಾಗಿ 27 ವರ್ಷಗಳ ಕಾಲ ಸುಧೀರ್ಘ ಸೇವೆ ಸಲ್ಲಿಸಿ ನಿವೃತ್ತರಾದರು.

ಕೆ. ಭೋಜರಾವ್ ಅವರ ಕನ್ನಡ ಪ್ರೀತಿ ಅನುಸರಣೀಯ. ಅವರು 1990 ರಿಂದ ತೊಡಗಿ ನಿರಂತರ ಮೂರು ದಶಕಗಳಿಂದ ನವದೆಹಲಿಯ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಯಾವುದೇ ಸಂಭಾವನೆ ಪಡೆಯದೆ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು ದೆಹಲಿಯ ಇಂಡಿಯನ್ ಇನ್ಸಿಟ್ಯೂಟ್ ಆಫ್ ಇಂಡಸ್ಟ್ರೀಯಲ್ ಇಂಜಿನಿಯರಿಂಗ್‌ನಲ್ಲೂ ಉಚಿತವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಲೆಕ್ಕ ಪರಿಶೋಧಕರಾಗಿ ಸಲ್ಲಿಸಿದ ಕೊಡುಗೆಗಳಿಗಾಗಿ ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವದಂದು ನೀಡುವ 2020ರ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪಡೆದಿದ್ದಾರೆ.

## ಕ್ಯಾನ್ಸರ್ ತಜ್ಞ ಡಾ. ನಿರಂಜನ ನಾಯ್ಕ್

ಉಡುಪಿ ತಾಲೂಕಿನ ಹಿರಿಯಡ್ಕದ ಡಾ. ನಿರಂಜನ ನಾಯ್ಕ್ ಇವರು ಕ್ಯಾನ್ಸರ್ ಸರ್ಜನ್ ಆಗಿ ಎರಡು ದಶಕಗಳಿಂದ ಸೇವೆಯಲ್ಲಿದ್ದಾರೆ. 1996ರಿಂದ ಸುಮಾರು ಹನ್ನೆರಡು ಸಾವಿರ ಕ್ಯಾನ್ಸರ್ ಸಂಬಂಧಿತ ಸರ್ಜರಿಗಳನ್ನು ಮಾಡಿರುತ್ತಾರೆ.

ಅವರು ಬೆಂಗಳೂರು ವಿಶ್ವವಿದ್ಯಾಲಯದ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದು ನಂತರ ನವದೆಹಲಿಯ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್‌ನಲ್ಲಿ ಎಂ.ಎಸ್. ಪದವಿ ಪಡೆದಿದ್ದರು. ನಂತರ ಅಲ್ಲಿಯೇ ಕ್ಯಾನ್ಸರ್ ಸರ್ಜರಿಯಲ್ಲಿ ತರಬೇತಿ ಪಡೆದರು. ಇಂದು ಭಾರತದ ಸುಮಾರು ಐನೂರು ರೋಬೋಟಿಕ್ ಸರ್ಜನರಲ್ಲಿ ಡಾ. ನಿರಂಜನ್ ಕೂಡಾ ಒಬ್ಬರು.

ಡಾ. ನಿರಂಜನ್ ಅವರು ಗುರುಗಾಂವ್‌ನಲ್ಲಿರುವ ಫೋರ್ಟಿಸ್ ಮೆಮೋರಿಯಲ್ ಸಂಶೋಧನಾ ಸಂಸ್ಥೆಯಲ್ಲಿ ಬ್ರೆಸ್ಟ್ ಆಂಡ್ ಗ್ಯಾಸ್ಟ್ರೋ ಇಂಟೆಸ್ಟಿನಲ್ ಆಂಕೋ ಸರ್ಜರಿಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ನವದೆಹಲಿಯ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್ (ಏಮ್ಸ್)ನ ಪ್ರತಿಷ್ಠಿತ ಇನ್ಸ್ಟಿಟ್ಯೂಟ್ ರೋಟರಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಸರ್ಜಿಕಲ್ ಆಂಕಾಲಜಿಯಲ್ಲಿ ಉನ್ನತ ಮಟ್ಟದ ತರಬೇತಿಯನ್ನು ಪಡೆದಿದ್ದಾರೆ. ಹಿಂದೆ ದೆಹಲಿಯ ಧರ್ಮಶೀಲ ನಾರಾಯಣ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಮೂಲ್‌ಚಂದ್ ಕೆ.ಆರ್. ಆಸ್ಪತ್ರೆ, ಮಾತಾ ಚನನ್ ದೇವಿ ಆಸ್ಪತ್ರೆ, ಕರೋಲ್‌ಭಾಗ್‌ನ ಮಿಲ್ಲೆನಿಯಮ್ ಆಸ್ಪತ್ರೆ, ನೋಯ್ಡಾದ ಕೈಲಾಸ್ ಆಸ್ಪತ್ರೆ, ಇಂದ್ರಪ್ರಸ್ಥ ಅಪೋಲೊ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಸಂಘದಲ್ಲಿ ಉಚಿತವಾಗಿ ವೈದ್ಯಕೀಯ ಸಲಹೆಗಳನ್ನು ನೀಡಿದ್ದಾರೆ. ಡಾ. ನಿರಂಜನ್ ಅವರು



ಪತ್ನಿ ಮನಶಾಸ್ತ್ರಜ್ಞೆಯಾಗಿರುವ ಶ್ರೀಮತಿ ಶಾಲ್ಮಲಿ ಹಾಗೂ ಪುತ್ರರಾದ ದೀಪಾಂಕ್ಷು ಮತ್ತು ಶ್ರೇಯಾಂಶ್‌ರೊಂದಿಗೆ ದೆಹಲಿಯಲ್ಲಿ ನೆಲೆಸಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಕೊಡುಗೆಗಳಿಗಾಗಿ ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವ ಸಮಾರಂಭದಲ್ಲಿ 2020ರ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದೆ.

## ರಂಗ ಕಲಾವಿದೆ ರಾಧಾ ಕೌಜಲಗಿ



ವಿಜಯಪುರದವರಾದ ಶ್ರೀಮತಿ ರಾಧಾ ಕೌಜಲಗಿ ಆರಂಭಿಕ ಶಿಕ್ಷಣವನ್ನು ಧಾರವಾಡದಲ್ಲಿ ಪಡೆದು ಗದಗದಲ್ಲಿ ಪದವಿ ಪಡೆದರು. ಶಾಲಾ ದಿನಗಳಂದಲೂ ಇವರು ಕಲೆ ಮತ್ತು ನಾಟಕಗಳಲ್ಲಿ ಅತೀವ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು.

ಎಂಬತ್ತರ ದಶಕದ ಆರಂಭದಲ್ಲಿ ರಂಗ ಕಲಾವಿದರೂ ಆಗಿದ್ದ ಪತಿ ದಿ. ಅರವಿಂದ ಕೌಜಲಗಿ ಅವರೊಂದಿಗೆ ದೆಹಲಿಗೆ ಬಂದು ಇಲ್ಲಿನ ಸೃಜನಶೀಲ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದರು. ಆಕಾಶವಾಣಿಯಲ್ಲಿ ಹಲವಾರು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನೀಡಿದ್ದರು.

ರಾಜಧಾನಿಯ ಖ್ಯಾತ ರಂಗ ಸಂಸ್ಥೆ 'ಕನ್ನಡ ಭಾರತಿ' ಯಲ್ಲಿ ಕಲಾವಿದೆಯಾಗಿ ಖ್ಯಾತ ನಿರ್ದೇಶಕ ಎಂ.ಎಸ್. ಸತ್ಯು, ದಿ. ಎಚ್.ಎಸ್. ಕುಲಕರ್ಣಿ ಮೊದಲಾದವರ ನಿರ್ದೇಶನದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದರು. ಸತ್ಯು ಅವರ ನಿರ್ದೇಶನದ 'ಮೋಟೇರಾಮನ ಸತ್ಯಾಗ್ರಹ' ನಾಟಕದಲ್ಲಿನ ಅವರ ಅಭಿನಯ ಸ್ಮರಣೀಯ. ಖ್ಯಾತ ನಿರ್ದೇಶಕ ಡಾ. ಟಿ.ಎಸ್. ನಾಗಾಭರಣ ಅವರ 'ಚಿಗುರಿದ ಕನಸು' ಚಲನಚಿತ್ರದಲ್ಲೂ ಕಿರು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಶ್ರೀಮತಿ ರಾಧಾ ಕೌಜಲಗಿ ಇವರು ರಾಜಧಾನಿಯ ಕನ್ನಡಪರ ಸಂಘಟನೆಗಳಲ್ಲಿ ಸಂಘಟಕಿಯಾಗಿ ಸಾಮಾಜಿಕ ಹಾಗೂ ಮಹಿಳಾಪರ ಚಟುವಟಿಕೆಯಲ್ಲೂ ತೊಡಗಿಸಿಕೊಂಡರು. ರಾಜೇಂದ್ರ ನಗರ ಕನ್ನಡ ಬಳಗದ ಉಪಾಧ್ಯಕ್ಷೆಯಾಗಿ, ಸ್ನೇಹಾ ಕನ್ನಡ ಲೇಡೀಸ್ ಕ್ಲಬ್‌ನ ಜಂಟಿ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ನಂತರ ಆರು ವರ್ಷಗಳ ಕಾಲ ಅಧ್ಯಕ್ಷೆಯಾಗಿ ಅದನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ.

ರಂಗಭೂಮಿ ಮತ್ತು ಕನ್ನಡ ಸಂಘಟನಾ ಕ್ಷೇತ್ರದಲ್ಲಿ ಸಲ್ಲಿಸಿದ ಕೊಡುಗೆಗಳಿಗಾಗಿ ದೆಹಲಿ ಕರ್ನಾಟಕ ಸಂಘದ 2020ರ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪಡೆದಿದ್ದಾರೆ.

ಈ ಮೂವರು ಸಾಧಕರ ಬದುಕು ಮತ್ತು ಸಾಧನೆ ನಿಜಕ್ಕೂ ಆದರ್ಶಮಯ ಹಾಗೂ ಇವರು ನಾಡು ನುಡಿಗೆ ಸಲ್ಲಿಸಿದ ಕೊಡುಗೆಗಳು ಮೌಲ್ಯಯುತವಾಗಿದೆ.

***ಡಾ. ಅವನೀಂದ್ರನಾಥ್ ರಾವ್***

# ಕನ್ನಡ ನೆಲದಿಂದ ದೂರ ಇರುವ ಭಾವನೆ ಮರೆಸಿದೆ

## -ರಾಧಾ ಕೌಜಲಗಿ

ದೆಹಲಿ ಕರ್ನಾಟಕ ಸಂಘವು ನಡೆಸುತ್ತಿರುವ ರಾಜ್ಯೋತ್ಸವ ಸಮಾರಂಭದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿಗಾಗಿ ನನ್ನನ್ನು ಪರಿಗಣಿಸಿದ್ದಾರೆ. ಈ ಪ್ರಶಸ್ತಿಯನ್ನು ನಾನು ಗೌರವಿಸುತ್ತೇನೆ. ಸಂಘದ ಈ ಗೌರವಕ್ಕಾಗಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ನಾನು ಹೃದಯಪೂರ್ವಕವಾಗಿ ಆಭಾರಿಯಾಗಿದ್ದೇನೆ. ದೆಹಲಿಯ ಮಹಾಮಾರಿ ಕೊರೊನಾದಿಂದ ತಪ್ಪಿಸಿಕೊಳ್ಳಲು ಪ್ರಸ್ತುತ ನಾನು ಕರ್ನಾಟಕದಲ್ಲಿ ಇದ್ದೇನೆ. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವುದಕ್ಕಾಗಿ ವಿಷಾದಿಸುತ್ತೇನೆ ಹಾಗೂ ಕ್ಷಮೆ ಕೋರುತ್ತೇನೆ. ದೆಹಲಿ ಕರ್ನಾಟಕ ಸಂಘ ಇದು ನಮಗೆ ಮಾತೃ ಸಂಸ್ಥೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಕರ್ನಾಟಕ ಸಂಘ ಈವರೆಗೆ ಮಾಡಿದ ಹಾಗೂ ಮಾಡುತ್ತಿರುವ ಕೆಲಸವು ಅತ್ಯಂತ ಶ್ಲಾಘನೀಯವಾಗಿದೆ. ಹೊರನಾಡ ಕನ್ನಡಿಗರಾದ ನಮಗೆ ಕನ್ನಡದ ನೆಲದಿಂದ ದೂರ ಇರುವ ಭಾವನೆಯನ್ನು ಮರೆಸುವಲ್ಲಿ ಕರ್ನಾಟಕ ಸಂಘದ ಪಾತ್ರ ಬಹಳ ಮಹತ್ವದ್ದಾಗಿದೆ. ಇಂತಹ ಸಂಘದೊಂದಿಗೆ ನಮ್ಮ ಒಡನಾಟ ಕಳೆದ 30 ವರ್ಷಗಳಿಂದ ನಡೆದು ಬಂದಿದೆ ಎಂದು ತಿಳಿಸಲು ನನಗೆ ಹೆಮ್ಮೆ ಎನಿಸುತ್ತಿದೆ. ಈ ಸಂಘವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನಷ್ಟೇ ಅಲ್ಲದೆ ಸಾಮಾಜಿಕ, ಶೈಕ್ಷಣಿಕ ಹಾಗೂ ಅನೇಕ ಕ್ಷೇತ್ರಗಳಲ್ಲಿ ಕನ್ನಡಿಗರ ಹಿತಕ್ಕಾಗಿ ಕೆಲಸ ಮಾಡುತ್ತಾ ಬಂದಿದೆ. ಇಂತಹ ಕರ್ನಾಟಕ ಸಂಘದಿಂದ ನಡೆಯುತ್ತಿರುವ ಈ ಪ್ರಶಸ್ತಿಗೆ ಅತ್ಯಂತ ಕೃತಜ್ಞತೆಗಳು.

***(ವಿಡಿಯೋ ಸಂದೇಶದಿಂದ)***




**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ದೂರವಾಣಿ : 011–26109615 / 26104818**

# ಅಗಲಿದ ಹಿರಿಯ ಪತ್ರಕರ್ತ, ಸಾಹಿತಿ ರವಿ ಬೆಳಗೆರೆ

ಹಿರಿಯ ಪತ್ರಕರ್ತ, ಸಾಹಿತಿ ರವಿ ಬೆಳಗೆರೆ (62) ಅವರು ದಿನಾಂಕ 13.11.2020 ರಂದು ನಿಧನರಾಗಿದ್ದಾರೆ. 'ಹಾಯ್ ಬೆಂಗಳೂರ್' ವಾರಪತ್ರಿಕೆ ಹಾಗೂ 'ಓ ಮನಸೇ' ಪಾಕ್ಷಿಕದ ಸಂಪಾದಕರಾಗಿದ್ದ ಅವರು 'ಪ್ರಾರ್ಥನಾ' ಹೆಸರಿನ ಶಾಲೆ ನಡೆಸುತ್ತಿದ್ದರು. 70ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದ ರವಿ ಬೆಳಗೆರೆ ಅವರು ಕಥೆಗಾರರಾಗಿ, ಟಿವಿ ಗಳಲ್ಲಿ ಕಾರ್ಯಕ್ರಮ ನಿರೂಪಕರಾಗಿಯೂ ಅಷ್ಟೇ ಜನಪ್ರಿಯತೆ ಗಳಿಸಿದವರು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕರ್ನಾಟಕದ ಪತ್ರಿಕೋದ್ಯಮದಲ್ಲಿ ಪ್ರತ್ಯೇಕವಾದ ಸ್ಥಾನ ಪಡೆದ ವ್ಯಕ್ತಿ ರವಿ ಬೆಳಗೆರೆ. ಇತ್ತೀಚಿನ ವರ್ಷಗಳಲ್ಲಿ ಯೂಟ್ಯೂಬ್‌ನಲ್ಲೂ ಚಾನೆಲ್ ಆರಂಭಿಸಿದ್ದ ಅವರಿಗೆ ಅದರಲ್ಲೂ ಜನಪ್ರಿಯತೆ ದಕ್ಕಿತ್ತು. ಕನ್ನಡ ಪತ್ರಿಕೋದ್ಯಮದಲ್ಲಿ ಭಿನ್ನ ಹಾದಿಯಲ್ಲಿ ಓದುಗರನ್ನು ತಲುಪಲು ಯತ್ನಿಸಿ, ಯಶಸ್ಸು ಕಂಡಿದ್ದವರು ರವಿ ಬೆಳಗೆರೆ. ಕಾರ್ಗಿಲ್ ಯುದ್ಧ, ಗುಜರಾತ್ ಭೂಕಂಪ, ಅಫ್ಘಾನಿಸ್ತಾನದ ಯುದ್ಧ ಭೂಮಿ ಹಾಗೂ ಈಚಿನ ಪುಲ್ವಾಮಾ ತನಕ ಕನ್ನಡದ ಓದುಗರಿಗೆ ದೇಶ ವಿದೇಶದ ಅತ್ಯಂತ ಸವಾಲಿನ ವರದಿ, ಸುದ್ದಿಯನ್ನು ನೀಡಿದ್ದರು.



ರವಿ ಬೆಳಗೆರೆ ಹುಟ್ಟಿದ್ದು ಮಾರ್ಚ್ 15, 1958. ತಾಯಿ ಬೆಳಗೆರೆ ಪಾರ್ವತಮ್ಮ ಹಾಗೂ ಸ್ವತಃ ರವಿ ಬೆಳಗೆರೆ ಅವರೇ ಹೇಳಿಕೊಂಡಂತೆ ತಂದೆ ಕನ್ನಡದ ಹೆಸರಾಂತ ಸಾಹಿತಿ ಬೀಚಿ. ಚಿತ್ರದುರ್ಗದ ಚಳ್ಳಕೆರೆ, ತುಮಕೂರು, ಬಳ್ಳಾರಿ, ಧಾರವಾಡ ಹೀಗೆ ವಿವಿಧೆಡೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಅವರು ಬಳ್ಳಾರಿಯಲ್ಲಿ ಉಪನ್ಯಾಸಕರಾಗಿಯೂ ಇದ್ದರು. ಅಲ್ಲಿ 'ಬಳ್ಳಾರಿ ಪತ್ರಿಕೆ' ಸ್ವಂತ ಪತ್ರಿಕೆ ಕೂಡ ಇತ್ತು. ಸಂಯುಕ್ತ ಕರ್ನಾಟಕ, ಲಂಕೇಶ್ ಪತ್ರಿಕೆ, ಈ ಸಂಜೆ ಸೇರಿದಂತೆ ವಿವಿಧ ಪತ್ರಿಕೆಗಳಿಗೆ ಕೆಲಸ ಮಾಡಿದ ಅವರು, 1995ರ ಸೆಪ್ಟೆಂಬರ್ 25ನೇ ತಾರೀಕು ಹಾಯ್ ಬೆಂಗಳೂರ್ ವಾರಪತ್ರಿಕೆ ಆರಂಭಿಸಿದರು. ಓ ಮನಸೇ ಪಾಕ್ಷಿಕ ಮಾಡಿದರು. ಈಚಿವಿಗಾಗಿ ಅವರು ನಡೆಸಿಕೊಡುತ್ತಿದ್ದ 'ಕ್ರೈಂ ಡೈರಿ' ಕಾರ್ಯಕ್ರಮ ರವಿ ಬೆಳಗೆರೆ ಅವರನ್ನು ಇನ್ನೊಂದು ಎತ್ತರಕ್ಕೆ ಒಯ್ದಿತು. ಆಕಾಶವಾಣಿಗಾಗಿ 'ಬೆಳ್ ಬೆಳಗ್ಗೆ ಬೆಳಗೆರೆ' ಎಂಬ ಕಾರ್ಯಕ್ರಮ ಮಾಡುತ್ತಿದ್ದರು. ಈಟಿವಿಗಾಗಿ ಅವರು ನಡೆಸಿಕೊಡುತ್ತಿದ್ದ 'ಎಂದೂ ಮರೆಯದ ಹಾಡು' ಜನಪ್ರಿಯತೆಯ ಉತ್ತುಂಗಕ್ಕೆ ಏರಿಸಿತ್ತು.

ಟಿ.ಎನ್. ಸೀತಾರಾಂ ಹಾಗೂ ಭಾವನಾ ಬೆಳಗೆರೆ ನಿರ್ಮಾಣದ ಧಾರಾವಾಹಿಯಲ್ಲೂ ಅವರು ಅಭಿನಯಿಸಿದ್ದರು. ವಾರಸ್ದಾರ, ಮಾದೇಶ, ಗಂಡ-ಹೆಂಡತಿ ಸೇರಿದಂತೆ ಕನ್ನಡ ಚಲನಚಿತ್ರಗಳಲ್ಲೂ ಅವರು ಅಭಿನಯಿಸಿದ್ದರು. ಜನಶ್ರೀ ಚಾನೆಲ್‌ನಲ್ಲಿ ಕೆಲ ಸಮಯ ಪ್ರಮುಖ ಹುದ್ದೆ ಕೂಡ ನಿರ್ವಹಿಸಿದ್ದರು.

ರವಿ ಬೆಳಗೆರೆ ಅವರಿಗೆ ಲಲಿತಾ ಬೆಳಗೆರೆ, ಯಶೋಮತಿ ಆಚಾರ್ ಇಬ್ಬರು ಪತ್ನಿಯರು. ಚೇತನಾ ಬೆಳಗೆರೆ, ಭಾವನಾ ಬೆಳಗೆರೆ, ಕರ್ಣ ಬೆಳಗೆರೆ ಹಾಗೂ ಹಿಮವಂತ್ ಬೆಳಗೆರೆ ನಾಲ್ವರು ಮಕ್ಕಳು. ಇಪತ್ತೆರಡನೇ ವಯಸ್ಸಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಬೆಳಗೆರೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕೋಟ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ, ಅನುವಾದ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಬಂದಿವೆ. ಕಳೆದ ಸೀಸನ್‌ನಲ್ಲಿ 'ಕನ್ನಡ ಬಿಗ್ ಬಾಸ್'ನಲ್ಲಿ ಕೂಡ ರವಿ ಬೆಳಗೆರೆ ಭಾಗವಹಿಸಿದ್ದರು. ಕೊರೊನಾ ಕಾರಣಕ್ಕೆ ಕೆಲ ಕಾಲ ಪತ್ರಿಕೆ ಪ್ರಕಟಣೆಯನ್ನು ಅವರು ನಿಲ್ಲಿಸಿದ್ದರು. ಆ ಮೇಲೆ ಈಚೆಗೆ ಪುನರಾರಂಭಿಸಿದ್ದರು.

ಅಗಲಿದ ಹಿರಿಯ ಪತ್ರಕರ್ತ, ಸಾಹಿತಿ ರವಿ ಬೆಳಗೆರೆ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ರವಿಯವರದ್ದು ಒಂದು ವಿಶಿಷ್ಟ ಪ್ರತಿಭೆ

ಕನ್ನಡ ವಿವಿಯ ಆರಂಭದ ದಿನಗಳಲ್ಲಿ (1993) ರವಿ ಬೆಳಗೆರೆ ಕೆಲಸ ಹುಡುಕಿಕೊಂಡು ಹಂಪಿಗೆ ಬಂದಿದ್ದರು. 'ನಾನು ಬಳ್ಳಾರಿ ಜಿಲ್ಲೆಯವನಾದ್ದರಿಂದ ನನಗೆ ಕೆಲಸ ಕೇಳುವ ಹಕ್ಕಿದೆ, ದಯವಿಟ್ಟು ಒಂದು ಕೆಲಸ ಕೊಡಿ' ಎಂದು ಅಲ್ಲಿದ್ದ ಹಲವರನ್ನು ಕೇಳಿಕೊಂಡಿದ್ದರು. ಆಗ ಅವರು ಬಹಳ ಕಷ್ಟದಲ್ಲಿದ್ದರು, ಅವರಿಗೊಂದು ಕೆಲಸದ ಅಗತ್ಯವೂ ಇತ್ತು. ಆದರೆ ಅವರಿಗೆ ಅಲ್ಲಿ ಕೆಲಸ ಸಿಗಲೇ ಇಲ್ಲ. ಮುಂದೆ ಅವರು ಬೆಂಗಳೂರು ಸೇರಿ ಅನೇಕರಿಗೆ ಕೆಲಸ ಕೊಡುವಷ್ಟು ಬೆಳೆದರು. ಪುಣ್ಯವಂತರ ಸಖ್ಯ ಬಯಸಿ ಪಾಪಿಗಳ ಲೋಕದಲ್ಲಿ ಕಳೆದು ಹೋದರು.

ಆರೋಗ್ಯ ಕಾರಣವಾಗಿ ನಾವು ಕೆಲವು ಸಂಗತಿಗಳನ್ನು ಹಂಚಿಕೊಳ್ಳುತ್ತಿದ್ದೆವು. ನಾನೇ ಅಶಿಸ್ತಿನ ಮನುಷ್ಯ. ಅವರದು ನನಗಿಂತಲೂ ಜಾಸ್ತಿ ಅಶಿಸ್ತು. ಹೀಗಾಗಿ ನಾವು ಅವರನ್ನು ಬೇಗನೇ ಕಳಕೊಂಡೆವು. 'ಯಾಕೆ ನೀವೆಲ್ಲಾ ನನ್ನ ಪುಸ್ತಕಗಳ ಬಗ್ಗೆ ಬರೆಯುವುದಿಲ್ಲ?' ಅಂತ ಒಮ್ಮೆ ನನ್ನಲ್ಲಿ ಕೇಳಿದ್ದರು. ' ಸುಮ್ನಿರು ಮಾರಾಯಾ, ನಮ್ಮಂಥವರು ಬರೆದು ನಿಮಗೇನಾಗಬೇಕಾಗಿದೆ?' ಅಂದಿದ್ದೆ.

ರವಿಯವರದು ಒಂದು ವಿಶಿಷ್ಟ ಪ್ರತಿಭೆ. ಅದು ಸೃಜನಾತ್ಮಕವೂ ಆಗಬಹುದು, ವಿನಾಶಕಾರಿಯೂ ಆಗಬಹುದು. ಕನ್ನಡ ವಿವಿಯಲ್ಲಿದ್ದರೆ ಈ ಪ್ರತಿಭೆ ಹೇಗಿರುತ್ತಿತ್ತು ಎಂದು ಯೋಚಿಸುವಾಗ ಅವರ ಜೊತೆ ಬಂಡೆಕಲ್ಲಿನ ಮೇಲೆ ಕುಳಿತು ಚಹಾ ಕುಡಿದಿದ್ದು, ಹೊಸಪೇಟೆಯಿಂದ ರಾತ್ರಿ ಬೆಂಗಳೂರು ಬಸ್ ಹತ್ತುವಲ್ಲಿವರೆಗೆ ಹರಟೆ ಹೊಡೆದದ್ದು ಎಲ್ಲ ನೆನಪಾಗುತ್ತಿದೆ.

ಈ ವರ್ಷ ಎಷ್ಟೊಂದು ಗೆಳೆಯರನ್ನು ಕಳಕೊಂಡೆವು ಎಂದು ಯೋಚಿಸುವಾಗ ಸಾವು ಸುತ್ತೆಲ್ಲೋ ಓಡಾಡುತ್ತಿರುವ ಅನುಭವವಾಗುತ್ತಿದೆ.

***ಡಾ. ಪುರುಷೋತ್ತಮ ಬಿಳಿಮಲೆ***

# ಜ್ಞಾನದ ಗಣಿಯಾಗಿದ್ದ ಸ್ನೇಹಿತ ರವಿ ಬೆಳಗೆರೆ

ಕರ್ನಾಟಕದ ಗಣಿ ಪ್ರದೇಶ ಬಳ್ಳಾರಿಯಿಂದ ಬಂದ ರವಿ ಬೆಳಗೆರೆ ಅವರು ಜ್ಞಾನದ ಗಣಿಯಾಗಿದ್ದರು. ಪ್ರಖರ ಬಿಸಿಲಿನ ಜಿಲ್ಲೆಯ ಅವರ ಪ್ರಖರತೆ ಇದ್ದದ್ದು ಅವರ ಸೂರ್ಯ ಸ್ಪಷ್ಟ ಬರವಣಿಗೆಯಲ್ಲಿ. ಒಂದು ದಶಕದಿಂದ ನನಗೆ ಆತ್ಮೀಯರಾಗಿದ್ದ ಸ್ನೇಹಿತ ರವಿ ಬೆಳಗೆರೆ ಅವರು ಈಚೆಗೆ ಅಗಲಿದ್ದು ಈಗಲೂ ನಂಬಲಾಗುತ್ತಿಲ್ಲ. ರವಿ ಬೆಳಗೆರೆ ಎಂದರೆ ನೆನಪಾಗುವುದು ಅವರ ಅಗಾಧ ಜ್ಞಾನ, ನೆನಪಿನ ಶಕ್ತಿ ಮತ್ತು ಸ್ನೇಹಪರತೆ.

ದಶಕದ ಹಿಂದೆ ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ದೋರ್ಜಿ ಖಂಡು ಅವರು ಹೆಲಿಕಾಪ್ಟರ್ ದುರಂತದಿಂದ ಮರಣ ಹೊಂದಿದ್ದರು. ಖಂಡು ಶಾಸಕರಾಗಿದ್ದ ವೇಳೆ ಬೆಳಗೆರೆ ಅವರ ಮನೆಯ ಅತಿಥ್ಯ ಪಡೆದಿದ್ದರು. ಆ ಸಂದರ್ಭದಲ್ಲಿ ಅಲ್ಲಿನ ಸಚಿವಾಲಯ ಗ್ರಂಥಾಲಯದಲ್ಲಿ ಓದಿದ್ದ ಪುಸ್ತಕ ಅವರಿಗೆ ನೆನಪಾಗಿ ಕಾಡಿತ್ತು. ಆ ಪುಸ್ತಕಕ್ಕಾಗಿ ನನಗೆ ಮೊರೆ ಇಟ್ಟಿದ್ದರು. ಗೆಳೆಯ ವೀರೇಶ್ ಹೊಗೆಸೊಪ್ಪಿನವರ್ ನಾನು ಕೇಂದ್ರ ಸಚಿವಾಲಯ ಗ್ರಂಥಾಲಯದಲ್ಲಿ ಇರುವ ವಿಷಯ ತಿಳಿಸಿದ್ದರು. ರವಿ ಬೆಳಗೆರೆ ಮಾತನಾಡಿದರು. ಅದು ಮಗುವೊಂದು ತನ್ನ ಇಷ್ಟದ ತಿನಿಸಿಗಾಗಿ ಕಾಡಿದಂತೆ ಇತ್ತು.

ನಾನಾದರೂ ಚಿತ್ರಕೂಟದ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದಿಂದ ಆಗ ತಾನೇ ಹಿಂದಿರುಗಿದ್ದೆ. ರೈಲು ಅಪಘಾತದಿಂದ ನನಗೆ ಏಟಾಗಿತ್ತು. ಅದು ನನ್ನ ಪಿ.ಎಚ್.ಡಿ. ವ್ಯಾಸಂಗದ ದಿನಗಳು. ರವಿ ಬೆಳಗೆರೆ ಅವರ ಅಧ್ಯಯನಾಸಕ್ತಿ, ಜ್ಞಾನ ದಾಹ ಅರಿತಿದ್ದ ನಾನು ಐ.ಎ.ಎಸ್. ಅಧಿಕಾರಿ ನಿರೂ ನಂದಾ ಅವರ 'ತವಾಂಗ್: ಲ್ಯಾಂಡ್ ಆಫ್ ಮೂನ್' ಕೃತಿಯ ಜೆರಾಕ್ಸ್ ಕಳಿಸಿದ್ದೆ. ಪ್ರತಿಕೂಲ ಸ್ಥಿತಿಯಲ್ಲಿ ಮಾಡಿದ ನನ್ನ ಸಹಾಯ ಅವರೆಂದೂ ಮರೆಯಲಿಲ್ಲ.

ನಾನು ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಶಸ್ತಿ ಪಡೆಯಲು 2012ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿಗೆ ಹೋಗಿದ್ದೆ. ಬಂದ ವಿಷಯ ತಿಳಿದು ನನ್ನನ್ನು ಅವರ ಕಚೇರಿಗೆ ಬರಮಾಡಿಸಿಕೊಂಡು ಮಾತನಾಡಿದ್ದರು. ಆ ದಿನ ಅವರ ಪೂಜ್ಯ ತಾಯಿ ಪಾರ್ವತಮ್ಮ, ಮಾವ ಬೆಳಗೆರೆ ಕೃಷ್ಣ ಶಾಸ್ತ್ರಿ, ಮುಲಕನಾಡು ಬ್ರಾಹ್ಮಣರಿಂದ ತೊಡಗಿ ಖುಷ್‌ವಂತ್ ಸಿಂಗ್, ಕನ್ನಡದ ಕತೆಗಾರ ಎಂ. ವ್ಯಾಸರ ಸಾಹಿತ್ಯದವರೆಗೆ ಎರಡು ತಾಸುಗಳ ಸುದೀರ್ಘ ಮಾತುಕತೆ ನಡೆದಿತ್ತು.



ರವಿ ಬೆಳಗೆರೆ ಮತ್ತು ಅವನೀಂದ್ರನಾಥ್ ರಾವ್

ಪ್ರವಾಸ ಪ್ರಿಯರಾಗಿ, ಇತಿಹಾಸದ ಬಗೆಗೆ ಅತೀವ ಆಸಕ್ತಿ ಹೊಂದಿದ್ದ ರವಿ ಬೆಳಗೆರೆ ಅವರು ನನ್ನ ನೆನಪಿನೊಂದಿಗೆ 'ಚಂಬಲ್ ದಾಟದವನಿಗೆ ಕಂಡಿದ್ದು ಚಿತ್ರಕೂಟ ಎಂಬ ಶುದ್ಧ ನರಕ' ಎಂಬ ಲೇಖನ ಬರೆದಿದ್ದರು. ಚಂಬಲ್‌ನ ಢಕಾಯಿತ ರಾಣಿ ಸೀಮಾ ಪರಿಹಾರ್‌ಳನ್ನು ಭೇಟಿಯಾಗಿ ಹಿಂತಿರುಗುವಾಗ ಅವರು ಚಿತ್ರಕೂಟಕ್ಕೆ ಭೇಟಿ ನೀಡಿದ್ದರು. ಶ್ರೀರಾಮನ ವನವಾಸದ ಕಾರಣಕ್ಕೂ ಚಿತ್ರಕೂಟ ಹೆಸರುವಾಸಿ.

ತಮ್ಮ 'ಖಾಸ್‌ಬಾತ್' ಅಂಕಣದಲ್ಲಿ ನನ್ನ ಕುರಿತು ಸಚಿತ್ರ ಲೇಖನ ಬರೆದು ಪ್ರೀತಿ, ಅಭಿಮಾನ ತೋರಿದ್ದರು. 'ನಾನು ಇಷ್ಟ ಪಡುವುದೇ ಈ ತೆರನಾದ ಚೆಕ್ಕರ್ಡ್ ಕೆರೀರ್ ಹೊಂದಿದ, ಸದಾ ಹೊಸತರ ಅನ್ವೇಷಣೆಯಲ್ಲಿ ತೊಡಗುವ ಮತ್ತು ವೃತ್ತಿಯಲ್ಲಿ, ಚಿಂತನೆಯಲ್ಲಿ ಟಿಸಿಲೊಡೆಯಲು ಹಾತೊರೆಯುವ ಮನುಷ್ಯರನ್ನ' ಎಂದು ನನ್ನ ಕುರಿತು ಬರೆದಿದ್ದನ್ನು ನಾನು ಮರೆಯಲಾರೆ. ನನಗೆ ಡಾಕ್ಟರೇಟ್ ಬಂದಾಗ 'ಡಾಕ್ಟ್ರೇ ನನಗೆ ಕೆಮ್ಮು, ಔಷಧ ಕೊಡಿ' ಎಂದು ತಮಾಷೆ ಮಾಡಿ ನಗಿಸಿದ್ದರು.

ಒಮ್ಮೆ ಇದ್ದಕ್ಕಿದ್ದಂತೆಯೇ ತಮ್ಮ ಮಗ ಕರ್ಣ ಬೆಳಗೆರೆ ಅವರ ಭಾವಚಿತ್ರ ಹಂಚಿಕೊಂಡು ಮಗನ ಕುರಿತು ಮಾತನಾಡಿದ್ದರು. ತನ್ನ ಕುಟುಂಬ, ಶಾಲೆ, ಸ್ನೇಹಿತರು, ಸಿಬ್ಬಂದಿ ವರ್ಗದವರನ್ನು ಹಚ್ಚಿಕೊಂಡು ಪ್ರೀತಿ, ಮಾನವೀಯತೆ ಮೆರೆದಿದ್ದ ಸ್ನೇಹಿತ ರವಿ ಬೆಳಗೆರೆ ಅವರು ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಅಕ್ಷರಗಳು ಮತ್ತು ಒಡನಾಟದ ಸವಿನೆನಪು ಸದಾ ನನ್ನೊಂದಿಗೆ ಜೀವಂತವಾಗಿರುತ್ತದೆ.

***ಡಾ. ಅವನೀಂದ್ರನಾಥ್ ರಾವ್***

## ರವಿ ಬೆಳಗೆರೆಯವರ ಪ್ರಮುಖ ಕೃತಿಗಳು

| | |
|---|---|
| 1. ಪಾ.ವೆಂ. ಹೇಳಿದ ಕತೆಗಳು | 1995 |
| 2. ಹಿಮಾಲಯನ್ ಬ್ಲಂಡರ್ (ಅನುವಾದ) | 1999 |
| 3. ಭೀಮಾ ತೀರದ ಹಂತಕರು | 2001 |
| 4. ಇಂದಿರೆಯ ಮಗ ಸಂಜಯ | 2002 |
| 5. ಹೇಳಿ ಹೋಗು ಕಾರಣ | 2003 |
| 6. ಇದು ಜೀವ ಇದುವೇ ಜೀವನ | 2012 |
| 7. ಅಮ್ಮ ಸಿಕ್ಕಿದ್ಲು | 2012 |

## ಒಲಿದ ಪುರಸ್ಕಾರುಗಳು

| | |
|---|---|
| 1. ಮಾಸ್ತಿ ಕಥಾ ಬಹುಮಾನ | 1990 |
| 2. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ | 1984, 1997 |
| 3. ಡಾ. ಶಿವರಾಮ ಕಾರಂತ ಪ್ರಶಸ್ತಿ | 2004 |
| 4. ಪ್ರಾರ್ಥನಾ ಶಾಲೆ ಗುಣಮಟ್ಟದ ಶಿಕ್ಷಣಕ್ಕೆ ರಾಷ್ಟ್ರಪ್ರಶಸ್ತಿ | 2005 |
| 5. ಕರ್ನಾಟಕ ಮಾಧ್ಯಮ ಅಕಾಡೆಮಿ ಗೌರವ ಪ್ರಶಸ್ತಿ | 2008 |
| 6. ಡಾ. ಶಿವರಾಮ ಕಾರಂತ ಹುಟ್ಟೂರ ಗೌರವ | 2008 |
| 7. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ | 2010 |

# ಮುಗಿದುಹೋದ ಖಾಸ್‌ಬಾತ್

ಆರು ವರ್ಷಗಳ ಹಿಂದೆ ವೀರೇಶ್ 'ಅಕ್ಕಾ ಬಾಸ್ ಬರ್ತಿದಾರೆ ದೆಹಲಿಗೆ' ಅಂತ ಸುದ್ದಿ ರವಾನಿಸಿದ್ದ. ಕಿಶೋರ್ ಕುಮಾರನ 'ಓಹ್ ಶಾಮ್ ಕುಛ್ ಅಜೀಬ್ ಥೀ'...ಹಾಡು ನೆನಪಾಯ್ತು. ಆ ಒಂದು ಸಂಜೆ...ಮುಸುಮುಸು ಮುಸ್ಸಂಜೆ ಸೂಸುತ್ತಿದ್ದ ಬೆಳಕಿನಲ್ಲಿ ಕತ್ತಲೆಯೂ ರಮಣೀಯವಾಗಿ ಕಾಣಿಸುತ್ತಿತ್ತು.

ನವಂಬರಿನ ಕುಳಿರು ಚಳಿಯ ರವಿ ಮುಳುಗುವ ಹೊತ್ತಿನಲ್ಲಿಯೇ ನಾನು ರವಿ, ಯಶೂ ಹಾಗೂ ಹಿಮನನ್ನು ಮೊದಲ ಸಲ ಭೇಟಿಯಾಗಿದ್ದೆ. ಖಾನ್ ಮಾರ್ಕೆಟ್ಟಿನ ದೊಡ್ಡ ದೊಡ್ಡ ಅಂಗಡಿಗಳು ಜಗಮಗಿಸುತ್ತಿದ್ದವು. ಪುಸ್ತಕ ಖರೀದಿಸುವುದಿದೆಯೆಂದು ಬಾಹರಿ ಸನ್ಸ್‌ನಲ್ಲಿಯೇ ಸಿಗೋಣವೆಂದು ನಿರ್ಧರಿಸಿದ್ದಾಗಿತ್ತು. ಹೊರಗಡೆ ಸಣ್ಣಗೇ ಸುಳಿಯುತ್ತಿದ್ದ ಚಳಿಯಲ್ಲಿ ಹರಟುತ್ತಾ ಹಿಮನ ಮುದ್ದು ಮಾತುಗಳಿಗೆ, ಕೇಳುವ ಪ್ರಶ್ನೆಗಳಿಗೆ ನಗುತ್ತಾ ನಾವೂ ದೆಹಲಿಯ ಚಳಿ, ಖುಶ್ವಂತ್ ಸಿಂಗ್, ಸುಜಾನ್ ಸಿಂಗ್ ಪಾರ್ಕು, ನಿಜಾಮುದ್ದೀನ್ ದರಗಾ. ಅಮೃತಾ ಪ್ರೀತಂ... ಹೀಗೇ ಏನೇನೋ ಹರಟುತ್ತಾ ಸಮಯ ಕಳೆದಿದ್ದೇ ಗೊತ್ತಾಗಿದ್ದಿಲ್ಲ. ಹೀಗೆ ಆರಂಭವಾದ ರವಿ ಬೆಳಗೆರೆಯವರ ಪರಿಚಯ ಓ ಮನಸೇ...ಗೆ ನನ್ನನ್ನು ಬರೆಯುವಂತೆ ಪ್ರೇರೆಪಿಸಿತು. ಯಶೂ ನಾನು ವಾಟ್ಸಪ್ಪುಗಳಲ್ಲಿ ಹಿಂದಿ ಹಳೇ ಹಾಡುಗಳನ್ನು ಹಂಚಿಕೊಳ್ಳುವಷ್ಟು ಸ್ನೇಹಮೂಡಿತ್ತು.

ನಾನೆಂದೂ ಹಾಯ್ ಬೆಂಗಳೂರನ್ನು ಓದಿದವಳಲ್ಲ. ಹೈಸ್ಕೂಲಿನಲ್ಲಿರುವಾಗ ಲೈಬ್ರರಿಗೆ ಸುಧಾ, ಮಯೂರ, ಕರ್ಮವೀರ ಹೀಗೆ ಕೆಲವೇ ಬೆರೆಳಣಿಕೆಯ ಮಾಸಪತ್ರಿಕೆಗಳೂ ಬರುತ್ತಿದ್ದವು. ಆಗೆಲ್ಲೋ ರವಿ ಬರೆದ ಕಥೆ ಓದಿದ್ದೆ, ಹೆಸರು ನೆನಪಿಲ್ಲ. ಕೊನೆಗೆ ನಾನು ದಟ್ಸ ಕನ್ನಡಡಾಟ್. ಕಾಮ್ ನಲ್ಲಿ ಪದ್ಯಗಳನ್ನು, ಸಣ್ಣ ಪುಟ್ಟ ದೆಹಲಿ ಕರ್ನಾಟಕ ಸಂಘದ ವರದಿಗಳನ್ನು, ಪ್ರಬಂಧಗಳನ್ನು ಬರೆದು ಕಳಿಸುತ್ತಿದ್ದೆ. ಅಲ್ಲಿ ಆ ಸಮಯದಲ್ಲಿ ರವಿ ಅವರ 'ಸೂರ್ಯಶಿಕಾರಿ' ಪ್ರಕಟವಾಗುತ್ತಿತ್ತು. ಹೀಗೆ ಅವರ ಬರೆಹಗಳನ್ನು ಓದುತ್ತಿರುವಾಗಲೇ 'ಖಾಸ್ ಬಾತ್', 'ಬಾಟಂ ಐಟಂ'ನ ಲಘುಬರೆಹಗಳು ಇಂದಿನ ತಲೆಮಾರಿನ ತವಕ ತಲ್ಲಣಗಳನ್ನು ರಸವತ್ತಾಗಿ ಇರುವುದಕ್ಕಿಂತ ಇಲ್ಲದಿರುವುದೇ ಹೆಚ್ಚು ಆಕರ್ಷಣೀಯವೆನ್ನುವಷ್ಟು ತಲೆಮಾರೊಂದನ್ನು ಆಕರ್ಷಿಸಿತ್ತು. ದಿಲ್ಲಿಯಲ್ಲಿ ನಮಗೆ ಎಲ್ಲ ಪತ್ರಿಕೆಗಳು ಲಭ್ಯವಿರದಿದ್ದರಿಂದ ಬಹಳಷ್ಟು ಪತ್ರಿಕೆಗಳನ್ನು ನಾನು ಓದಲಿಲ್ಲ. ನಂತರ ಲೈಬ್ರರಿಯ ಕಾರ್ಡ ಮಾಡಿಸಿಕೊಂಡಾಗ ತಂದು ಪುಸ್ತಕಗಳನ್ನು ಓದಿದ್ದಿದೆ.

ರವಿ ಬೆಳಗೆರೆ ಬರಹದಂತೆ ಅವರಲ್ಲಿ ಇಷ್ಟವಾಗುವ ಗುಣವೆಂದರೆ ಸರಳತೆ. ನಿಗರ್ವಿ. ಸೊಕ್ಕು, ಹಮ್ಮುಬಿಮ್ಮುಗಳಿರದ ಸರಳತೆ. ನನ್ನ ಜೊತೆಗಂತೂ ಧಾರವಾಡ ಭಾಷೆಯಲ್ಲಿಯೇ ಮಾತಾಡುತ್ತಿದ್ದುದರಿಂದ ಇನ್ನಷ್ಟು ಆಪ್ತವೆನಿಸುತ್ತಿತ್ತು.



ರವಿ ಬೆಳಗೆರೆ, ಶ್ರೀಮತಿ ರೇಣುಕಾ ನಿಡಗುಂದಿ, ಯಶೋಮತಿ ಬೆಳಗೆರೆ ಮತ್ತು ಉದಯ್ ಮರಕಿಣಿ

ನಾನು ಬರೆದು ಕಳಿಸಿದ ಯಾವುದನ್ನೂ ಅಲ್ಲಗಳೆದದ್ದೇ ಇಲ್ಲ. ಅಥವಾ ಹೀಗಿರಬೇಕು ಹಾಗಿರಬೇಕು ಎಂದು ತಿದ್ದಿದ್ದೂ ಇಲ್ಲ. ಆಗ ಓ ಮನಸೇ... ನೋಡಿಕೊಳ್ಳುತ್ತಿದ್ದುದು ಉದಯ್ ಮರಕಿಣಿ ಅವರು. ಈಗ ಅವರು ಹೇಗಿದ್ದಾರೋ ಏನೋ. ಉದಯ್ ಮರಕಿಣಿ ಅವರ ಹಠಾತ್ ಅನಾರೋಗ್ಯದಿಂದಾಗಿ ಅವರು ಪತ್ರಿಕೆ ನೋಡಿಕೊಳ್ಳುವುದನ್ನು ನಿಲ್ಲಿಸಿದಾಗ ಓ ಮನಸೇ ಯೂ ನಿಯಮಿತರೂಪದಲ್ಲಿ ಬರುತ್ತಿದ್ದಿಲ್ಲ. ಅತ್ತಲಿಂದ ಯಾವ ಸಂಗತಿಗಳೂ ತಿಳಿಯದೇ ನಾನೂ ಬರೆಯುವುದನ್ನು ನಿಲ್ಲಿಸಿದ್ದೆ.

ಆದರೆ ಹಾಗೊಮ್ಮೆ ಬೆಂಗಳೂರಿನ ಗೆಳತಿಯರೊಡನೆ ಸುತ್ತಾಡುತ್ತಿದ್ದಾಗ–ರವಿ ಫೋನು...ಎಲ್ಲಿದ್ದೀರಿ ಅಂತ? ಬೆಂಗಳೂರಿಗೆ ಬಂದು ಭೇಟಿಯಾಗದೇ ಹೋಗ್ತಿಯಾಕವ್ವಾ, ಬರಬೇಕು ಗಾಡಿ ಕಳಿಸ್ತೀನಿ ಡ್ರೈವರ್ ಕರ್ಕೊಂಡು ಬರ್ತಾನೆ ಅಂತ ಹೇಳಿದರು. ಆಗ್ರಹಕ್ಕೆ ಮಣಿದು ಕೊನೆಗೂ ಪದ್ಮನಾಭನಗರದ ಕಚೇರಿ ತಲುಪಿದ್ದೆ. ಯಶೋಮತಿ, ಉದಯ್ ಮರಕಿಣಿ, ರವಿ, ತೋರಿದ ಅಕ್ಕರೆ ಮರೆಯುವಂತಿಲ್ಲ. ನನ್ನ ದೆಹಲಿಯ ಪರಿಚಿತ ತಮ್ಮ ವೀರೇಶ್ ಹೊಗೆಸೊಪ್ಪಿನವರ್ ಕಚೇರಿಯ ಸಿಬ್ಬಂದಿಯನ್ನು ಪರಿಚಯಿಸಿದ್ದ. ಹೊರಟಾಗ ಮಾತ್ರ ಕಣ್ಣುಗಳು ಹನಿಗೂಡುವ ಸಂದರ್ಭ ಕಾದಿತ್ತು ನನಗೆ. ಹೆಣ್ಣುಮಗಳೊಬ್ಬಳು ತವರಿಗೆ ಬಂದು ಹೊರಟಾಗ ಅಣ್ಣ ಅತ್ತಿಗೆಯರು ಉಡಿತುಂಬಿ ಸೀರೆಯುಡಿಸಿ ಕಳಿಸುವ ರೀತಿಯಲ್ಲಿಯೇ ಯಶೋಮತಿ ಒಂದು ಬ್ಯಾಗಿನಲ್ಲಿ ರೇಶಿಮೆ ಸೀರೆಯ ಬಾಕ್ಸ್, ಹಸಿರುಬಳೆ, ಬಾಗಿನ ಕೈಗಿತ್ತು ಕಳಿಸಿದ್ದು ನನಗಿನ್ನೂ ಮೊನ್ನೆ ಮೊನ್ನೆ ನಡೆದಷ್ಟೇ ನಿಚ್ಚಳವಾಗಿದೆ.

ಮೊದಲಿನ ರವಿಯನ್ನಂತೂ ನಾನು ನೋಡಿಲ್ಲ. ಟಿವಿ ಕಾರ್ಯಕ್ರಮಗಳನ್ನೂ ನೋಡಿಲ್ಲ. ಈಗ ಯುಟ್ಯೂಬುಗಳಲ್ಲಿ ರಾಶಿ ರಾಶಿ ವಿಡಿಯೋಗಳಿವೆ ಯಾವತ್ತಾದರೂ ನೋಡಬಹುದು, ಆದರೆ ಅವತ್ತು ಸಂಜೆ ನಾ ಕಂಡ ರವಿ 'ಖಾಸ್ ಬಾತ್', 'ಬಾಟ್ಂ ಐಟಂ'ನ ಲವಲವಿಕೆಯ ರವಿಯಾಗಿದ್ದಿಲ್ಲ. ಸಾವಿರಾರು ಮೈಲು ನಡೆದು ಸೋತು ಹೈರಾಣಾದಂತೆ ಕಾಣುತ್ತಿದ್ದರು. ಆರೋಗ್ಯ ಹಾಳಾಗಿತ್ತು. ಬಹಳ ಹಸಿವೆ ಅಂತ ತರಿಸಿಕೊಂಡಿದ್ದನ್ನು ತಿನ್ನಲಾರದಷ್ಟು ಅಶಕ್ತಿಯೋ, ಅನಾಸಕ್ತಿಯೋ ಗೊತ್ತಿಲ್ಲ. ಆದರೆ ಉತ್ಸಾಹ ಮಾತ್ರ ಬತ್ತಿರಲಿಲ್ಲ. ಮಾರನೇ ದಿನವೇ ಜಯಪುರಿಗೆ ಹೋಗುವ ಖುಶಿಯಲ್ಲಿದ್ದರು. ನವಂಬರ್ 25 ಹಿಮನ ಹುಟ್ಟುಹಬ್ಬದ ಆಚರಣೆಗೆ. ಇತ್ತೀಚೆಗೆ ಲಾಕ್ ಡೌನ್ ಸಂದರ್ಭದಲ್ಲಿ ತಾವೇ ಫೋನ್ ಮಾಡಿ ಮಾತಾಡಿಸಿದ್ದರು. ಆದರೆ ಇಷ್ಟು ಬೇಗ ರವಿ ಅಸ್ತಂಗತನಾಗುತ್ತಾನೆಂದು ಅಂದುಕೊಂಡಿದ್ದಿಲ್ಲ. ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ. ಹೋಗುವಾಗ ಏನನ್ನೂ ಕೊಂಡೊಯ್ಯುವುದಿಲ್ಲ ಯಾರೂ. ಕೊನೆಗೆ ಉಳಿಯುವುದು ಮನುಷ್ಯನ ಒಳ್ಳೆಯತನ, ಕೆಟ್ಟತನ ಎರಡೇ. ಇದನ್ನು ಬರೆಯುವಾಗಲೂ ನೆನಪಾಗುವುದು 'ವೊಹ್ ಶಾಮ್ ಕುಛ್ ಅಜೀಬ ಥೀ, ಯೇಹ್ ಶಾಮ್ ಭೀ ಅಜೀಬ್ ಹೈ' ತನ್ನ ಬರಹಗಳಿಂದಲೇ ಲಕ್ಷಾಂತರ ಯುವ ಹೃದಯಗಳನ್ನು ಗೆದ್ದಿದ್ದ ಅಕ್ಷರ ಮಾಂತ್ರಿಕನಿಗೆ ಭಾವಪೂರ್ಣ ಶ್ರದ್ಧಾಂಜಲಿ.

***ರೇಣುಕಾ ನಿಡಗುಂದಿ***

# ನಿಮ್ಮ ಬರವಣಿಗೆಗೆ ಸಾಟಿಯಿಲ್ಲ ಸರ್, ಹೋಗಿ ಬನ್ನಿ.

ನಿಮ್ಮ ಬರವಣಿಗೆಗೆ ಸಾಟಿಯಿಲ್ಲ ಸರ್, ಹೋಗಿ ಬನ್ನಿ. ಭರಪೂರ ಅಭಿಮಾನಿಗಳನ್ನೂ, ಅಭಿಮಾನಿ-ಓದುಗರನ್ನೂಅಗಲಿದಂತಹ ಅಕ್ಷರ ಪ್ರೇಮಿಗೆ ನನ್ನ ನಮನಗಳು.


ಛಲದಂಕ ಮಲ್ಲ. - ಅಚಲ ಮನೋಬಲ ಒಂದಿದ್ದರೆ ಸಾಕು ಜೀವನದಲ್ಲಿ ಏನಾದರೂ ಸಾಧಿಸಲು ಖಂಡಿತ ಸಾಧ್ಯ ಅನ್ನೋದನ್ನ ತೋರಿಸಿಕೊಟ್ಟವರು ರವಿ ಬೆಳಗೆರೆ ಅವರು. ಎಸೆಸೆಲ್ಸಿ ಫೇಲಾದರೂ ಛಲ ಬಿಡದೇ, ಸೋಲದೇ ಮುಂದೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಆರು ವರ್ಷ ಉಪನ್ಯಾಸಕರಾಗಿ ವೃತ್ತಿ ಮಾಡಿದರು.

ಈಗಿನ ಮಕ್ಕಳಲ್ಲಿ ಇವರಂತಹ ಆತ್ಮ ವಿಶ್ವಾಸ, ಅಚಲ ನಿರ್ಧಾರ, ಮಾಡಿಯೇ ತೀರುವೆನೆಂಬ ಛಲ ಎಲ್ಲಿದೆ ಹೇಳಿ?. ಒಂದು ಬಾರಿ ಸೋತರೇ ಸಾಕು ಮನೆಯವರ ಮನಸನ್ನೂ ಅರಿತುಕೊಳ್ಳದೇ ನೇರವಾಗಿ ಆತ್ಮಹತ್ಯೆಗೆ ಶರಣಾಗುತ್ತಾರೆ.

ರವಿಯವರ ಜೀವದಲ್ಲೂ ಅನೇಕ ಏರುಪೇರುಗಳಿದ್ದವು. ಅವುಗಳನ್ನೇ ನೋಡುತ್ತಾ ಕೂರದೆ ಮುಂದೆ ಸಾಗಿದ ಅವರ ವ್ಯಕ್ತಿತ್ವ ನನಗೆ ಇಷ್ಟ ಆಗಿದ್ದು. ಅವರು ದೃಢ ನಿರ್ಧಾರದ ಬಲು ಗಟ್ಟಿ ಮನುಷ್ಯ. ಇಂತಹ ಜನರಿಗೆ ಅಧ್ಯಾಪಕ ಜೀವನ ರುಚಿಸಲು ಸಾಧ್ಯವಿಲ್ಲ. ಇವರಿಗೆ ಮುಕ್ತ ಮೈದಾನು ಬೇಕು. ಹಾಗಾಗಿಯೇ ಬರವಣಿಗೆಯ ಬಗ್ಗೆ ಇದ್ದ ಅವರ ಒಲವು ಪತ್ರಿಕೋದ್ಯಮದತ್ತ ಕೊಂಡೊಯ್ಯಿತು.

ಮುಂದೆ ಅವರು ನಾಡಿನ ವಿವಿಧ ಪತ್ರಿಕೆಗಳಾದ - ಕರ್ಮವೀರ, ಸಂಯುಕ್ತ ಕರ್ನಾಟಕ ಮತ್ತು ಕಸ್ತೂರಿ ಪತ್ರಿಕೆಗಳಲ್ಲಿ ಕೆಲಸ ಮಾಡಿ ನಂತರ ತಮ್ಮದೇ ಪತ್ರಿಕೆಗಳಾದ- 'ಹಾಯ್ ಬೆಂಗಳೂರ್' ಎಂಬ ವಾರಪತ್ರಿಕೆ ಹಾಗೂ 'ಓ ಮನಸೇ' ಪಾಕ್ಷಿಕ ಪತ್ರಿಕೆಯಂತಹ 'ಪತ್ರಿಕಾ-ಕೂಸು'ಗಳನ್ನು ಹುಟ್ಟು ಹಾಕಿದ ಸಾಹಸಿ.

'ಫಸ್ಟ್ ಹಾಫ್'- ಓದಿದಾಗ ಬೆಳಗೆರೆ ಅವರ ಸಾಧನೆ-ಸಿದ್ಧಿಗಳ ಬಗ್ಗೆ ಇನ್ನಷ್ಟು ಪರಿಚಯವಾಯಿತು. ನಿನ್ನೆಯ ಬಗ್ಗೆ ಕಾಳಜಿ ಮಾಡದೆ ನಾಳಿನ ಬಗ್ಗೆ ತಲೆಕೆಡಿಸಿಕೊಳ್ಳದೇ, ಯಾರು ಏನೆಂದಾರೆಂಬ ಭಯ ಅಥವಾ ಹಿಂಜರಿಕೆ ಇಲ್ಲದೇ, ಪ್ರತಿ ಕ್ಷಣವನ್ನೂ ತನ್ನದೇ ಶೈಲಿಯಲ್ಲಿ ನಿರೂಪಿಸಿಕೊಂಡವರು. ಅಷ್ಟೇ ಅಲ್ಲ, ನಾಲ್ಕು ಜನರೆದುರಿಗೆ ತನ್ನ ಬಗ್ಗೆ ಮನಬಿಚ್ಚಿ ಮಾತನಾಡಲು ಧೈರ್ಯ ಬೇಕು.



ಅವರ ಹಾಗೆಯೇ ಅವರ ಬರಹಗಳೂ ನೇರ ಹಾಗೂ ದಿಟ್ಟತನದಿಂದ ತುಂಬಿವೆ. ಅವರು ಬರೆದಿರುವ ಪ್ರತಿಯೊಂದು ಶಬ್ದಗಳ ಸಾಲುಗಳು ಎಲ್ಲರ ಮನದಲ್ಲಿ ಸದಾ ನೆನಪಿನಲ್ಲಿ ಉಳಿಯುತ್ತವೆ. ವ್ಯಾವಹಾರಿಕ ಜಾಣ್ಮೆಯ ಕೌಶಲ್ಯ ಪಡೆದು, ಓದುಗರನ್ನು ಮಂತ್ರಮುಗ್ಧರನ್ನಾಗಿಸಿ, ಮುಂದಿನ ಕಂತಿಗೆ ಕಾಯುವಂತೆ ಮಾಡುವ ಮೋಡಿಗಾರ. ನನಗೆ ಎಲ್ಲಕ್ಕೂ ಹೆಚ್ಚು ಇಷ್ಟವಾದದ್ದು ಅವರ 'ಕ್ರೈಂ ಸ್ಟೋರಿ'. ಅದನ್ನು ನಿರೂಪಿಸಿದ ರೀತಿ.

70 ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿ, ಅನೇಕ ವಿಶಿಷ್ಟ ಕತೆ-ಕಾದಂಬರಿಗಳ ಮೂಲಕ ಅವ್ಯಾಹತವಾಗಿ ಮುಂದುವರಿಸಿದ ಪರಿಗೆ 'ಅಕ್ಷರಯಜ್ಞ' ಅನ್ನಬಹುದು. ರವಿಯದು ದೈತ್ಯ ಬರವಣಿಗೆ.

ಇದರ ಜೊತೆಗೆ ಕನ್ನಡದ ವಾಹಿನಿಯೊಂದರಲ್ಲಿ ಬಿತ್ತರವಾದ 'ಕ್ರೈಂ ಡೈರಿ' ಕಾರ್ಯಕ್ರಮದ ನಿರ್ವಹಣೆ, 'ಎಂದೂ ಮರೆಯದ ಹಾಡು'ವಿನಂಥ ಹಾಡುಗಳ ಕಾರ್ಯಕ್ರಮದ ನಿರೂಪಣೆ, ಧ್ವನಿಸಾಂದ್ರಿಕೆ (ಸಿ.ಡಿ.) ನಿರ್ಮಾಣದಂಥ ಚಟುವಟಿಕೆಗಳೂ ಸಾಂಗವಾಗಿ ನೆರವೇರಿಸಿದರು.

ಅನೇಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಜೀವಮಾನದ ಸಾಧನೆ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇನ್ನೂ ಅನೇಕ ಪುರಸ್ಕಾರಗಳನ್ನು ಪಡೆದು ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಒಂದು ಛಾಪನ್ನು ಬಿಟ್ಟು ಹೋಗಿದ್ದಾರೆ.

ನನಗೆ ಅವರ ವೈಯಕ್ತಿಕ ವಿಷಯದಲ್ಲಿ ಆಸಕ್ತಿ ಇಲ್ಲ. ಅವರ ಕೆಲವು ಲೇಖನಗಳು ತುಂಬಾ ಇಷ್ಟವಾಗಿವೆ. ಕೆಲವೊಂದು ವಿಷಯಗ ಬಗ್ಗೆ ಕೇಳಬೇಕೂಂತ ಒಮ್ಮೆ ಭೇಟಿಯಾಗಲು ಹೋಗಿದ್ದೆ. ಆದರೆ ಅವರು ಸಿಗಲಿಲ್ಲ, ಆಮೇಲೆ ಆ ಸಮಯ ಬರಲೇ ಇಲ್ಲ "ಕುಡ್ದು ಕುಡ್ದು ಸತ್ತ ಅನ್ನಿಸಿಕೊಳ್ಳೋದಿಕ್ಕಿಂತ ಬರೆದೂ ಬರೆದೂ ಸತ್ತ ಅನ್ನಿಸಿಕೊಳ್ಳಬೇಕು "ಅನ್ನೋದನ್ನ ಸಿದ್ಧಪಡಿಸುವ ಹಾಗೆ ಕೊನೆಗೆ ತಮ್ಮ ಪ್ರೀತಿಯ 'ಪ್ರಾರ್ಥನಾ ಶಾಲೆ'ಯಲ್ಲೇ ಕೊನೆಯುಸಿರೆಳೆದ ರವಿಯವರ ಕರ್ತೃತ್ವಶಕ್ತಿಗೆ, ಬದ್ಧತೆಗೆ ಜ್ವಲಂತಸಾಕ್ಷಿ.

ಇಂಥ ಅಪ್ರತಿಮ ಅಕ್ಷರಪ್ರೇಮಿಯನ್ನು ಕನ್ನಡ ಸಾರಸ್ವತ ಲೋಕ ಇಂದು ಕಳೆದುಕೊಂಡಿದೆ. ಒಂದು ಕಾಲದಲ್ಲಿ ಓದುವ ಹುಚ್ಚು ಹಿಡಿಸಿದ ಅಕ್ಷರ ಮಾಂತ್ರಿಕನ ಆತ್ಮಕ್ಕೆ ಸದ್ಗತಿ ಸಿಗಲಿ.

ಓಂ ಶಾಂತಿ.

***ಸವಿತಾ ಇನಾಮದಾರ್***

('ಹಾಯ್ ಬೆಂಗಳೂರ್' ಪತ್ರಿಕೆಯಲ್ಲಿ ಪ್ರಕಟಿತ)

**"ಅಕ್ಷರ ಬಲ್ಲ ಪ್ರತಿಯೊಬ್ಬರನ್ನೂ ಒಂದಲ್ಲ ಒಂದು ಹಂತದಲ್ಲಿ ಒಬ್ಬ ಗುರುವು ಕೈ ಹಿಡಿದು, ಕಿವಿ ಹಿಂಡಿ, ಬೈದು-ಬಡಿದು, ಬೆನ್ನು ತಟ್ಟಿ ಬುದ್ಧಿ- ಪಾಠ ಹೇಳಿ ಬೆಳೆಸಿರುತ್ತಾನೆ. ಯಾರನ್ನು ಮರೆತರೂ ಬದುಕಿನಲ್ಲಿ ಅವರನ್ನು ಮರೆಯಲಾಗುವುದಿಲ್ಲ"**


**-ರವಿ ಬೆಳಗೆರೆ**

## ಕೃತಿ ಸಮೀಕ್ಷೆ

# ಬಿಳಿಮಲೆಯವರ ಆತ್ಮಕಥನದ ಜಾಡಿನಲ್ಲಿ

ದೆಹಲಿಯಲ್ಲಿ ಎರಡು ದಶಕಗಳಿಗೂ ಮೀರಿ ಕನ್ನಡ ಸಾಹಿತ್ಯ, ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಭಾಗವಾಗಿದ್ದ ಡಾ. ಪುರುಷೋತ್ತಮ ಬಿಳಿಮಲೆಯವರ ಆತ್ಮಕಥನ 'ಕಾಗೆ ಮುಟ್ಟಿದ ನೀರು: ಚದುರಿ ಬಿದ್ದ ಆತ್ಮದ ತುಣುಕುಗಳು' ಹಲವಾರು ಕಾರಣಗಳಿಂದಾಗಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿ ಅದರ ಸಾಂಸ್ಕೃತಿಕ ಸಮುಚ್ಚಯವನ್ನು ಕಟ್ಟಿ ಮುಗಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು ಇದಕ್ಕೆ ಒಂದು ಕಾರಣವಾದರೆ ಅವರು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ದೆಹಲಿಗೆ ಬರುವ ಮೊದಲೆ ಸಾಕಷ್ಟು ಕೆಲಸ ಮಾಡಿದ್ದು ಇನ್ನೊಂದು ಗುರುತರ ಕಾರಣವಾಗಿದೆ. ಸಂಶೋಧನಾ ಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕರಾಗಿ ಹತ್ತಾರು ವರ್ಷಗಳ ಕಾಲ ಅವರು ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ಈ ತಮ್ಮ ಕಾರ್ಯಕಾಲದಲ್ಲಿ ದೇಶವಿದೇಶಗಳನ್ನು ಸುತ್ತಿದ್ದಾರೆ ಮತ್ತು ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದ್ಧತೆಯ ಹಿನ್ನಲೆಯಲ್ಲಿ ಹಲವಾರು ಲೇಖನಗಳನ್ನು ಮತ್ತು ಪುಸ್ತಕಗಳನ್ನು ಕಾಲಕಾಲಕ್ಕೂ ಬರೆಯುತ್ತ ಬಂದಿದ್ದಾರೆ. 2015ರಿಂದ ಐದು ವರ್ಷಗಳ ಕಾಲ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಭಾರತೀಯ ಭಾಷಾ ಸಂಸ್ಥಾನದಲ್ಲಿರುವ ಕನ್ನಡ ಪೀಠದ ಮುಖ್ಯಸ್ಥರಾಗಿ ಮತ್ತು ಪ್ರಾಧ್ಯಾಪಕರಾಗಿಯೂ ಅವರು ಉಪಯುಕ್ತವಾದ ಕೆಲಸವನ್ನು ಮಾಡಿದ್ದಾರೆ. ಕನ್ನಡದ ಹಲವು ನಿಯತಕಾಲಿಕಗಳಲ್ಲಿ ಅವರು ನಿರಂತರವಾಗಿ ಲೇಖನಗಳನ್ನು ಬರೆಯುತ್ತಿರುತ್ತಾರೆ. ಇದಲ್ಲದೆ ಅವರ ಅಂಕಣ ಬರಹಗಳು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಇಷ್ಟೆಲ್ಲ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಡಾ. ಬಿಳಿಮಲೆಯವರು ತಮ್ಮ ಆತ್ಮಕಥನವನ್ನು ಬರೆಯುವ ನಿರ್ಧಾರವನ್ನು ತೆಗೆದುಕೊಂಡದ್ದಲ್ಲದೆ ಅದನ್ನು ಬರೆದು ಮುಗಿಸಿದ್ದು ಅವರ ಶೈಕ್ಷಣಿಕ ಆಸಕ್ತಿಯ ಪ್ರತೀಕವಾಗಿದೆ.

ಈಗಾಗಲೆ ಅವರ ಈ ಆತ್ಮಕಥನದ ಕುರಿತಾಗಿ ಸಾಕಷ್ಟು ಲೇಖನಗಳು, ಚರ್ಚೆಗಳು ಕನ್ನಡದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸುಮಾರು ಮುನ್ನೂರು ಪುಟಗಳಲ್ಲಿ ಡಾ. ಬಿಳಿಮಲೆಯವರು ತಮ್ಮ ಬದುಕಿನ ವಿವಿಧ ಮಜಲುಗಳನ್ನು ಸಾಕಷ್ಟು ವಿಸ್ತಾರವಾಗಿ ಒಂದು ಬಗೆಯ 'ನಿರ್ಲಿಪ್ತತೆ'ಯ ಭಾವದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮನ್ನು ಈ ಆತ್ಮಕಥನದಲ್ಲಿ ಚಿತ್ರಿಸಿಕೊಳ್ಳುವಾಗ ಅವರಿಗೆ ತಾವೊಬ್ಬ ಸಾಧಾರಣ ಮನುಷ್ಯನೆಂಬ ಭಾವಕ್ಕೆ ಮತ್ತು ಅದರ ಓಲಾಟಕ್ಕೆ ಅವರು ಸದಾ ಸ್ಪಂದಿಸುತ್ತಿರುವುದನ್ನು ನಾವು ಕಾಣಬಹುದು. ಈ ಬಗೆಯ ಅವರ ಭಾವ ಎಲ್ಲೂ ಕೃತ್ರಿಮವಾಗಿ ತೋರುವುದಿಲ್ಲ. ತೀರಾ ಸಹಜಗತಿಯಲ್ಲಿ ಅವರ ಮನೆಯ ಬಳಿಯ ತೊರೆ ಹರಿದು ಹೋಗುವ ರೀತಿಯಲ್ಲಿ




| | |
|---|---|
| ಪ್ರಕಾಶಕರು | : ಅಹರ್ನಿಶಿ ಪ್ರಕಾಶನ, ಶಿವಮೊಗ್ಗ |
| ಪುಟಗಳು | : 304 |
| ಬೆಲೆ | : ರೂ. 300/- |
| ವರ್ಷ | : 2020 |

ಪುಸ್ತಕದೊಳಕ್ಕೆ ಹಾಸುಹೊಕ್ಕಾಗಿರುವಂತೆ ಕಾಣುತ್ತದೆ. ದೊಡ್ಡ ವ್ಯಕ್ತಿಗಳು, ಅಂತಹ ವ್ಯಕ್ತಿತ್ವ ಉಳ್ಳವರು ಆತ್ಮಕಥನಗಳನ್ನು ಬರೆಯುವುದು ಸಹಜ ಮತ್ತು ಅದನ್ನು ಓದುವವರ ಬಳಗವೂ ಇರುತ್ತದೆಯೆಂಬ ಅರಿವು ಅವರಿಗೂ ಇದೆ. ಆದರೆ ತನ್ನಂತಹವರ ಪುಟ್ಟ ಬದುಕಿನಲ್ಲೂ ಮಹತ್ವದ ಘಟನೆಗಳು ನಡೆಯುವ ಸಾಧ್ಯತೆಗಳನ್ನು ಅವರು ಕಂಡುಕೊಳ್ಳುತ್ತಾರೆ. ಅವರ ಬದುಕಿನ ಮೊದಲ ಪುಟಗಳನ್ನು ಸುಳ್ಯದ ಹಲವಾರು ಕುಗ್ರಾಮಗಳಲ್ಲಿ ಕಾಣಬಹದು. ಬಿಳಿಮಲೆ ಅವರ ಮೂಲದ ಊರು. ಅಲ್ಲೆಲ್ಲ ಇರುವ ದಟ್ಟ ಕಾಡು, ಬಂಟಮಲೆ, ವಾಟಕಾಜೆ, ಪಂಜ...ಹೀಗೆ ಹತ್ತು ಹಲವಾರು ಅದ್ಭುತವಾದ ಜಾಗೆಗಳ ನವಿರಾದ ವಿವರಗಳನ್ನು ಮತ್ತು ನೆನಪುಗಳ ಹಂದರವನ್ನು ಅವರು ಅತ್ಯಂತ ಸುಂದರವಾದ ಮತ್ತು ಮುಗ್ಧವಾದ ಭಾಷೆಯಲ್ಲಿ ಕಟ್ಟಿಕೊಡುತ್ತಾರೆ. ಬಾಲ್ಯದ ಈ ಎಲ್ಲ ಘಟನಾವಳಿಗಳಲ್ಲಿ ತುಂಬಿರುವ ಮುಗ್ಧತೆ ಮತ್ತು ಉತ್ಸಾಹ ಅವರದ್ದೆ. ಅದನ್ನು ಅವರು ತಮ್ಮ ಜೀವನುದುದ್ದಕ್ಕೂ ತಮ್ಮ ನೆನೆಪಿನ ಬುತ್ತಿಯಲ್ಲಿ ಇರಿಸಿಕೊಂಡು ಬರುವುದನ್ನು ನಾವು ಪುಸ್ತಕದ ಉದ್ದಕ್ಕೂ ಕಾಣಬಹುದು. ಒಂದು ವಿಶಿಷ್ಟವಾದ ಮನದಲ್ಲಿಳಿವ ಭೌಗೋಳಿಕ ಪ್ರದೇಶ ಜೊತೆಗೆ ಯಕ್ಷಗಾನ, ಅರ್ಥಗಾರಿಕೆ, ಭೂತಪ್ರೇತ... ಇವೆಲ್ಲವೂ ಒಟ್ಟಾರೆಯಾಗಿ ಅವರ ಸಾಂಸ್ಕೃತಿಕ ಲೋಕದ ಸೃಜನಶೀಲತೆಯನ್ನು ಮುಂದಿನ ಎಲ್ಲ ಕಾಲಕ್ಕೂ ರೂಪಿಸುವುದನ್ನು ನಾವು ಕಾಣಬಹುದು.

ಅವರ ಬಾಲ್ಯದ ದಿನಗಳ ಚಿತ್ರಣಗಳು ಸಾಕಷ್ಟು ವಿವರಗಳಿಂದ ಕೂಡಿವೆ. ಅಲ್ಲಿ ವಿವರಣೆಗಳಿಗೆ ಎಡೆಯಿಲ್ಲದ್ದನ್ನು ನಾವು ಕಾಣಬಹುದು. ಅವರು ಈ ಬಾಲ್ಯದ ಮತ್ತು ತಮ್ಮ ಮುಗ್ಧ ಅರಿವಿನ ಪರಿಧಿಯಿಂದ ಹೊರಬರುತ್ತಿದ್ದ ಹಾಗೆಯೆ ವಿವರಗಳಿಂದ ಅವರು ವಿವರಣೆಯತ್ತ ಅಸ್ಪಷ್ಟವಾಗಿ ಸಾಗುವುದನ್ನು ನಾವು ಕಾಣಬಹುದು. ಸುಳ್ಯದ ಕಾಲೇಜು, ನಂತರದಲ್ಲಿ ಪುತ್ತೂರು, ಮದ್ರಾಸು, ಮಂಗಳೂರು, ಹಂಪಿ...ಇಲ್ಲೆಲ್ಲಾ ಅವರ ಬೌದ್ಧಿಕ ಕಸರತ್ತು ಮತ್ತು ಸಾಮಾಜಿಕ ಬದ್ಧತೆಯ ಒಳನೋಟಗಳು ಕಾಣಸಿಗುತ್ತವೆ. ನಂತರದಲ್ಲಿ ಹಲವಾರು ಕಾರಣಗಳಿಂದಾಗಿ ಮನಸ್ಸೊಲ್ಲದ ಮನಸ್ಸಿನಲ್ಲಿ ಕರ್ನಾಟಕವನ್ನು ತೊರೆದು ದೆಹಲಿಯತ್ತ ಮುಖಮಾಡಿದಾಗ ಅವರು ತಮ್ಮ ಬದುಕಿನಲ್ಲಿ ಹೊಸದನ್ನು ಕಲಿಯುವ ಮತ್ತು ಅದಕ್ಕೆ ಒಡ್ಡಿಕೊಳ್ಳುವ ಮನಸ್ಥಿತಿಯನ್ನು ತೋರುತ್ತಾರೆ. ಮುಂದಿನ ಎರಡು ದಶಕಗಳಲ್ಲಿ ದೆಹಲಿ ಅವರ ಕಾರ್ಯರಂಗವಾದರೂ ಕರ್ನಾಟಕವೆಂಬುದು ಅವರ ಚಟುವಟಿಕೆಗಳ ಕೇಂದ್ರಬಿಂದುವಾಗಿರುವುದನ್ನು ನಾವು ಗಮನಿಸಬಹುದು. ಈ ದೃಷ್ಟಿಯಿಂದ ಬಿಳಿಮಲೆಯವರು ದೆಹಲಿಗೆ 1998ರ ಆಸುಪಾಸಿನಲ್ಲಿ ಬಂದಾಗ ನಾವು ಬದಲಾಗುತ್ತಿರುವ ಸಾಮಾಜಿಕ ಮತ್ತು ತಂತ್ರಜ್ಞಾನಗಳ ಪರಿಯನ್ನು ಕಾಣಬಹುದು. ತಂತ್ರಜ್ಞಾನದ ಕಾರಣದಿಂದಾಗಿ ದೆಹಲಿ ಮತ್ತು ಕರ್ನಾಟಕದ ನಡುವಿನ ಅಂತರವು ಪೂರಾ ಕಳೆದು ಹೋಗುವ ಪರಿಯನ್ನು ನಾವು ಈ ಕಾಲದಲ್ಲಿ ಕಾಣಬಹುದು. ಇದರಿಂದಾಗಿ ಹೊರನಾಡ ಮತ್ತು ಒಳನಾಡ ಕನ್ನಡಿಗರ ನಡುವಿನ ಅಂತರಗಳು ಮಾಯವಾಗುವುದನ್ನು ನಾವು ಕಾಣಬಹುದು. ಈಗ ದೆಹಲಿಯಂತಹ ಜಾಗೆಯಲ್ಲಿ ಕನ್ನಡದ ಎಲ್ಲ ಸವಲತ್ತುಗಳೊಡನೆ ಬದುಕುವ ಸಾಧ್ಯತೆಗಳನ್ನು ನಾವು ಕಾಣಬಹುದಾಗಿದೆ. ದೆಹಲಿ ಕರ್ನಾಟಕ ಸಂಘವನ್ನು ಕಟ್ಟುವುದರತ್ತ, ಸಂಘಕ್ಕಾಗಿ ಹಣವನ್ನು ಒಟ್ಟು ಮಾಡುವುದರತ್ತ ಒಳನಾಡ ಮತ್ತು ಹೊರನಾಡ ಕನ್ನಡಿಗರ ಶಕ್ತಿಯನ್ನು ಬಿಳಿಮಲೆಯವರು ಕ್ರೋಢೀಕರಿಸಿದ್ದನ್ನು ನಾವು ಅವರ ದೆಹಲಿ ಕರ್ನಾಟಕ ಸಂಘದ ಅಧ್ಯಾಯದಲ್ಲಿ ಕಾಣಬಹುದು.

ತಮ್ಮ ಬದುಕು, ಆರೋಗ್ಯ, ಬರವಣಿಗೆ, ಮಾತುಕತೆಗಳ ಬಗೆಗೆಲ್ಲ ಅವರ ಈ ಆತ್ಮಕಥನದ ತುಣುಕುಗಳಲ್ಲಿ ವಿವರಗಳಿವೆ. ಅವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಮತ್ತು ಎಲ್ಲ ಅವರ ಅತ್ಯಂತ ಸಂಕಷ್ಟಗಳ ಸಮಯದಲ್ಲಿ ಅವರೊಂದಿಗೆ ಸದಾ ನಿಂತ ತಮ್ಮ ಬಾಳಸಂಗಾತಿ ಶೋಭನಾರವರ ಬಗ್ಗೆ ಡಾ. ಬಿಳಿಮಲೆಯವರು ನೀಡುವ ವಿವರಗಳು ಸಾಕಷ್ಟು ಒಳನೋಟಗಳನ್ನು ನಮಗೆ ನೀಡುತ್ತದೆ. ಅವರ ಆರೋಗ್ಯದ ಕುರಿತಾದ ವಿವರಗಳು ಮೇಲ್ನೋಟಕ್ಕೆ ಹಗುರವಾಗಿ ಕಂಡರೂ ಅವರು ಅನುಭವಿಸಿದ ನೋವುಗಳನ್ನು ನಾವು ಅರಿತುಕೊಳ್ಳಬೇಕು. ಈ ಎಲ್ಲವನ್ನು ಹೇಗೆ ಡಾ. ಬಿಳಿಮಲೆಯವರು ಹತ್ತಿರಹತ್ತಿರ 300 ಪುಟಗಳಲ್ಲಿ ನಮೂದಿಸಿಬಿಡುತ್ತಾರೆ ಎಂಬುದೇ ಒಂದು ದೊಡ್ಡ ವಿಸ್ಮಯವಾಗಿ ಗೋಚರಿಸುತ್ತದೆ. ಬಹುಶಃ ಡಾ. ಬಿಳಿಮಲೆಯವರು ಈ ಚದುರಿದ ತುಣುಕುಗಳನ್ನು ಮತ್ತೊಮ್ಮೆ ಸೇರಿಸಲು ಇನ್ನೊಂದು ಪುಸ್ತಕವನ್ನು ಬರೆಯಬೇಕಾದಿತು.

***ಪ್ರೊ. ವೆಂಕಟಾಚಲ ಹೆಗಡೆ***

# ಜಾಗತಿಕ ಕಾವ್ಯೋತ್ಸವದಲ್ಲಿ ದೆಹಲಿ ಕನ್ನಡಿಗರು

ನವರಾತ್ರಿ ಹಬ್ಬದ ಹಿನ್ನಲೆಯಲ್ಲಿ ಬೆಂಗಳೂರಿನ 'ಈ ಹೊತ್ತಿಗೆ' ಟ್ರಸ್ಟ್ ಜಾಗತಿಕಮಟ್ಟದ 'ವಿಶ್ವ ಕನ್ನಡ ನವರಾತ್ರಿ ಕಾವ್ಯೋತ್ಸವ'ವನ್ನು ಆಯೋಜಿಸಿತ್ತು. ದಿನಾಂಕ 19.10.2020ರಂದು ಅಂತರ್ಜಾಲದ ಫೇಸ್‌ಬುಕ್ ಲೈವ್ ಕಾರ್ಯಕ್ರಮದಲ್ಲಿ ನಡೆದ ಈ ಕಾವ್ಯೋತ್ಸವದಲ್ಲಿ ದೆಹಲಿಯ ಕವಿಗಳು ಕವಿತೆಗಳನ್ನು ವಾಚಿಸಿದರು ಮತ್ತು ಕಲಾವಿದರು ಗೀತೆಗಳನ್ನು ಹಾಡಿದರು.

ದೆಹಲಿಯ ಕವಿಗಳಾದ ಶ್ರೀಮತಿ ರೇಣುಕಾ ನಿಡಗುಂದಿ, ಡಾ. ಅವನೀಂದ್ರನಾಥ್ ರಾವ್, ಶ್ರೀಮತಿ ಸವಿತಾ ಇನಾಮದಾರ್, ಅರವಿಂದ ಬಿಜ್ಜೈ, ಈಶ್ವರಲಿಂಗ ಅರೇರಾ, ಶ್ರೀಮತಿ ರತ್ನಶ್ರೀ ಶ್ರೀಧರ್ ಅವರು ಸ್ವರಚಿತ ಕವನಗಳನ್ನು ವಾಚಿಸಿದರು.

ಗಾಯಕಿಯರಾದ ಶ್ರೀಮತಿ ಪೂರ್ಣಿಮಾ ಅಡಿಗ ಮತ್ತು ಶ್ರೀಮತಿ ಶುಭಾ ದೇವಿಪ್ರಸಾದ್ ಅವರು ಕವಿ ಎಚ್.ಎಸ್. ಶಿವಪ್ರಕಾಶ್ ಸೇರಿದಂತೆ ಕನ್ನಡ ಕವಿಗಳ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

'ಈ ಹೊತ್ತಿಗೆ'ಯ ಸಂಚಾಲಕಿ, ಸಾಹಿತಿ ಶ್ರೀಮತಿ ಜಯಲಕ್ಷ್ಮೀ ಪಾಟೀಲ್ ಅವರು ಎಲ್ಲ ಕವಿಗಳನ್ನು ಮತ್ತು ಗಾಯಕಿಯರನ್ನು ಅಭಿನಂದಿಸಿ ವಂದಿಸಿದರು. ದೆಹಲಿಯ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಈ ಕಾರ್ಯಕ್ರಮವನ್ನು ಸಂಯೋಜಿಸಿ ನಿರೂಪಿಸಿದರು.

ಅಮೆರಿಕ, ಆಸ್ಟ್ರೇಲಿಯಾ ಸೇರಿದಂತೆ ವಿಶ್ವದಾದ್ಯಂತ ಹದಿನೇಳು ಕವಿಗೋಷ್ಠಿಗಳನ್ನು ಈ ಹೊತ್ತಿಗೆ ಟ್ರಸ್ಟ್ ಆಯೋಜಿಸಿತ್ತು.

# ರಾಜ್ಯೋತ್ಸವ ಸಂಭ್ರಮಾಚರಣೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 65ನೇ ಕರ್ನಾಟಕ ರಾಜ್ಯೋತ್ಸವವನ್ನು ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕನ್ನಡ ಶಿಕ್ಷಕರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದ ಜಯ ಜಯ ಜಯ ಕನ್ನಡ ರಾಜೇಶ್ವರಿ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಮುಖ್ಯ ಅತಿಥಿ ಶಿಕ್ಷಣ ಇಲಾಖೆ, ಪಶ್ಚಿಮ ಎ ನವದೆಹಲಿ ಇದರ ಉಪನಿರ್ದೇಶಕ ಡಾ. ಮಲ್ಲಿಕಾರ್ಜುನ ಕೆ.ಎಸ್. ಅವರು ದೀಪ ಬೆಳಗಿಸಿ ಚಾಲನೆ ನೀಡಿ ಕನ್ನಡ ಭುವನೇಶ್ವರಿಗೆ ಪುಷ್ಪಾರ್ಚನೆಗೈದರು. ಪ್ರಾಥಮಿಕ ಶಿಕ್ಷಕರ ನವೀಕೃತ ಕೊಠಡಿಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ನಮ್ಮ ಕನ್ನಡ ನಾಡು ಸಾಹಿತಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ನಾವು ಎಲ್ಲೇ ಇದ್ದರೂ ನಮ್ಮ ನಾಡಿನ ಬಗ್ಗೆ ಅಭಿಮಾನವಿರಬೇಕು ಎಂದರು.

ಶಾಲಾ ವಾತಾವರಣ, ಸಂರಚನೆ ಹಾಗೂ ಸುಸಜ್ಜಿತ ವ್ಯವಸ್ಥೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಈ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡುವಲ್ಲಿ ಶಿಕ್ಷಣ ಇಲಾಖೆಯ ಜೊತೆಗೆ ಕನ್ನಡಿಗನಾದ ನನ್ನ ಸಹಕಾರವೂ ಇದೆಯೆಂದು ಭರವಸೆ ನೀಡಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ 1959ರಲ್ಲಿ ಅಂದಿನ ರಾಜ್ಯಸಭಾ ಉಪಸಭಾಧ್ಯಕ್ಷ ಎಸ್. ವಿ. ಕೃಷ್ಣಮೂರ್ತಿ ರಾವ್ ಸ್ಥಾಪಿಸಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು ತದನಂತರ ಮುನ್ನೆಡೆಸಿದವರು ಸರೋಜಿನಿ ಮಹಿಷಿ ಹಾಗೂ ಹಿರಿಯ ಕನ್ನಡಿಗರು. ಅನಂತರದಲ್ಲಿ ಕರ್ನಾಟಕದ ಯಾವ ರಾಜಕಾರಣಿಗಳು ಈ ಸಂಸ್ಥೆಯ ಅಭಿವೃದ್ಧಿಯ ಕುರಿತಾಗಿ ಆಸಕ್ತಿ ತೋರಿಸಿಲ್ಲ. ದೆಹಲಿಯ ಕೇಜ್ರಿವಾಲ್ ಸರಕಾರದ ಶಾಲೆಯೆದುರು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು ತಲೆ ಎತ್ತಿ ನಿಲ್ಲುವಂತೆ ಮಾಡಲು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರು ಹಾಗೂ ಸರಕಾರದಿಂದ ಆಯ್ಕೆಯಾದ ಪ್ರತಿನಿಧಿಗಳು ಮುಂದಾಗಬೇಕು ಎಂದು ಮನವಿ ಮಾಡಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಅವರು ರಾಜ್ಯೋತ್ಸವದ ಶುಭಾಶಯ ಕೋರಿ ಹಿತ ನುಡಿದರು.

ಕನ್ನಡ ಶಿಕ್ಷಕರಿಂದ ಮೊಳಗಿದ ನಾಡಗೀತೆ, ಕನ್ನಡೇತರ ಶಿಕ್ಷಕರಾದ ಬಿದಿಶಾ ಅವರಿಂದ ಮೂಡಿಬಂದ ಬಸವಣ್ಣನ ವಚನ, ಕನ್ನಡ ಪೋಷಕರಿಂದ ಪ್ರಸ್ತುತಗೊಂಡ ಕರ್ನಾಟಕವೆಂದರೆ ಬರಿ ನಾಡಲ್ಲ ಎಂಬ ಗೀತೆ, ಶಾಲಾ ಆವರಣದ ಸುತ್ತಲೂ ರಾರಾಜಿಸುತ್ತಿದ್ದ ಕನ್ನಡ ಬಾವುಟ, ಕೊರಳಲ್ಲಿ ಮಿನುಗುತ್ತಿದ್ದ ಕನ್ನಡ ಶಾಲು ಹೊರನಾಡಿನ ಮಣ್ಣಿನಲ್ಲೂ ಕನ್ನಡದ ಕಂಪನ್ನು ಪಸರಿಸುತಿತ್ತು.

ಸಂಸ್ಥೆಯ ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ. ಆರ್., ಮಾಲಿನಿ ಪ್ರಹ್ಲಾದ್, ಜಯಶ್ರೀ ಬಸವರಾಜು, ಗಿರೀಶ್ ಎಸ್., ಬಿ. ಎಲ್. ಮೋಹನ್, ಕನ್ನಡ ಶಾಲಾ ಶಿಕ್ಷಕ ಶಿಕ್ಷಕೇತರ ವೃಂದದವರು, ಕನ್ನಡ ಪೋಷಕರು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಕೆ. ಕೆ. ವಂದಿಸಿದರು. ಶಿಕ್ಷಕಿ ರೇಖಾ ಐ. ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ಕಾವ್ಯ ಅನ್ನುವುದು ರೂಪಕ ಭಾಷೆ

## - ರಮೇಶ ಅರೋಲಿ




ಕಾವ್ಯ ಅನ್ನುವುದು ರೂಪಕ ಭಾಷೆ. ನಾದದ ಗುಣ ಯಾವ ಭಾಷೆಗೆ ಇರುತ್ತದೋ ಆ ಭಾಷೆ ಎಲ್ಲರನ್ನು ಎಂದಿಗೂ ತಲುಪುತ್ತದೆ. ನಾವು ನಮ್ಮ ದೇಹವನ್ನು, ಮನಸ್ಸನ್ನು ನಾದಕ್ಕೆ ಒಪ್ಪಿಸುತ್ತೇವೆ. ಭಾಷೆಗೆ ಆ ತರಹದ ಒಂದು ಲಯವಿದೆ ಎಂದು ಸಾಹಿತಿ, ಕಮಲಾ ನೆಹರು ಕಾಲೇಜು ನವದೆಹಲಿಯ ಸಹ ಪ್ರಾಧ್ಯಾಪಕರಾದ ರಮೇಶ್ ಅರೋಲಿ ಅವರು ಹೇಳಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 65ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಫೇಸ್‌ಬುಕ್ ನೇರ ಪ್ರಸಾರದಲ್ಲಿ ದೆಹಲಿ ಕನ್ನಡ ಶಾಲಾ ಶಿಕ್ಷಕರು ನಡೆಸಿಕೊಟ್ಟ ರಾಜ್ಯೋತ್ಸವ – ಕಾವ್ಯೋತ್ಸವ ಕಾರ್ಯಕ್ರಮದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಭಾಷೆ ಅದು ಅಳು, ನಗು ಹೀಗೆ ಹಲವಾರು ಭಾವಗಳ ಜೊತೆ ಪ್ರಕಟವಾಗುತ್ತದೆ. ನಮ್ಮ ನುಡಿ ಪ್ರಸ್ತುತಗೊಳ್ಳುವುದು ಮಾತಿನ, ಆಚರಣೆಯ ಮೂಲಕ. ಪ್ರಸ್ತುತ ಪಡಿಸಿದ ಎಲ್ಲ ಕವಿತೆಗಳು ಧ್ವನಿ ಹಾಗೂ ಅರ್ಥಪೂರ್ಣವಾಗಿದ್ದವು. ದೆಹಲಿಯಲ್ಲಿದ್ದುಕೊಂಡು ಇಂತಹ ಸಾಹಿತ್ಯ ಕಾರ್ಯಕ್ರಮಗಳ ಮೂಲಕ ಕನ್ನಡದ ಸ್ತುತಿ ಮಾಡುತ್ತಾ ರಾಜ್ಯೋತ್ಸವದ ಆಚರಣೆ ಮಾಡುತ್ತಿರುವುದು ಅಭಿಮಾನದ ವಿಚಾರ ಎಂದರು. ಬಿಳಿಕ ಮಯೂರ ಪತ್ರಿಕೆಯಲ್ಲಿ ಪ್ರಕಟವಾದ ನುಡಿದೊಂದ ಪದದಲ್ಲಿ ನನ್ನೂರಿದೆ ಎನ್ನುವ ಅರ್ಥಪೂರ್ಣ ಸ್ವರಚಿತ ಕವಿತೆಯನ್ನು ಪ್ರಸ್ತುತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಸಂಸ್ಥೆಯು ನಿರ್ಮಿಸಿದ ಹೊಸ ಸ್ವಾಗತ ಕಕ್ಷೆಯಲ್ಲಿ ಈ ಕಾವ್ಯೋತ್ಸವದ ಮೂಲಕ ಕನ್ನಡದ ಪೂಜೆ ನಡೆದಿದೆ. ಶಾಲೆಯನ್ನು ಕನ್ನಡಮಯ ಮಾಡಬೇಕೆಂಬ ನಮ್ಮ ಅಭಿಲಾಷೆಗೆ ಶಿಕ್ಷಕರ ಸಂಪೂರ್ಣ ಸಹಕಾರ ದೊರೆಯುತ್ತಿದೆ. ಕನ್ನಡ ಶಿಕ್ಷಕರು ಕನ್ನಡೇತರ ಮಕ್ಕಳಲ್ಲಿ ಮಾತ್ರವಲ್ಲ, ಕನ್ನಡೇತರ ಶಿಕ್ಷಕರರಲ್ಲಿಯೂ ಕನ್ನಡಾಭಿಮಾನವನ್ನು ಬೆಳೆಸುತ್ತಿರುವುದನ್ನು ಕಂಡು ಸಂತೋಷವಾಗುತ್ತಿದೆ. ದೆಹಲಿಯಲ್ಲಿ ಕನ್ನಡ ಭಾಷೆಯನ್ನು ಉಳಿಸುವ, ಬೆಳೆಸುವ ಪ್ರಯತ್ನ ದೆಹಲಿ ಕನ್ನಡ ಶಾಲೆಯಿಂದ ಆಗಲಿ ಎಂಬುವುದೇ ನನ್ನ ಆಶಯ ಎಂದರು.

ಕವಿಗೋಷ್ಠಿಯಲ್ಲಿ ದೆಹಲಿ ಕನ್ನಡ ಶಾಲಾ ಶಿಕ್ಷಕರಾದ ಅಕ್ಕಮಹಾದೇವಿ ತಾಳಿಕೋಟಿ, ಮಾಲಾ ಗೋಪಾಲ್, ಹನುಮಂತ ಎಸ್. ತೇಲಿ, ಅರವಿಂದ ಬಿಜ್ಜೈ, ಜ್ಯೋತಿ ಎಸ್. ಪೊದ್ದಾರ್, ನಳಿನಿ ಹಿರಿಯಣ್ಣ, ಲಾವಣ್ಯ ಬಸವರಾಜ್, ಶಿಲ್ಪಾ ಹಾಲ್ಕರ್ ಕನ್ನಡ ನಾಡುನುಡಿಯ ಕುರಿತಾದ ಸ್ವರಚಿತ ಕವಿತೆಗಳನ್ನು ವಾಚಿಸಿದರು. ಅರವಿಂದ ಬಿಜ್ಜೈ ಕಾರ್ಯಕ್ರಮವನ್ನು ನಿರೂಪಿಸಿದರು.

# ರಂಗಭೂಮಿ ಮತ್ತು ಮಹಿಳೆ ಕುರಿತ ಸಂವಾದ

ದೆಹಲಿಯ ದಿನಕರ ಫೌಂಡೇಶನ್ ವತಿಯಿಂದ ದಿನಾಂಕ 28.11.2020 ಅಂತರ್ಜಾಲ ಅಂಗಳದಲ್ಲಿ 'ರಂಗಭೂಮಿ ಮತ್ತು ಮಹಿಳೆ' ಸಂವಾದ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪನ್ಯಾಸಕ ಡಾ. ವೆಂಕಟಗಿರಿ ದಳವಾಯಿ ಅವರು ಮಾತನಾಡಿ ಹೆಣ್ಣು ತಾನಾಗಿ ರಂಗಪ್ರವೇಶವನ್ನು ಬಯಸಿದವಳಲ್ಲ. ಆದರೆ ಈ ಸಮಾಜವೇ ಕಲೆಯಲ್ಲಿ ಅವಳನ್ನು ತೊಡಗಿಸಿಕೊಳ್ಳಬೇಕೆಂಬ ಪ್ರಯತ್ನವನ್ನು ಸದಾ ಮಾಡುತಿತ್ತು. ಪ್ರಾಚೀನ ಕಾಲದಿಂದಲೂ ದೇವದಾಸಿಯರು, ನರ್ತಕಿಯರು ಇವರೆಲ್ಲರೂ ಕಲೆಯ ಭಾಗವಾಗಿ ನಮ್ಮೊಳಗೆ ಪ್ರವೇಶ ಪಡೆದುಕೊಂಡರು. ಆಧುನಿಕ ಕಾಲದಲ್ಲಿ ಚಾರಿತ್ರಿಕ, ಪಾವಿತ್ರತ್ಯೆಯ ದೃಷ್ಟಿಯಿಂದ ಹೆಣ್ಣಿಗೆ ಅವಕಾಶ ಕೊಡಬಾರದು ಎಂಬ ವಾದಗಳು ಹುಟ್ಟಿಕೊಂಡಿದ್ದವು. ವೃತ್ತಿ ರಂಗಭೂಮಿಯಲ್ಲಿ ಮಹಿಳೆಯರ ರಂಗಪ್ರವೇಶಕ್ಕೆ ಶಿವಮೂರ್ತಿ ಕಣಬುರ್ಗಿಮಠ ಅವರು ಪ್ರಾಧಾನ್ಯತೆ ನೀಡಿದವರು. ಮುಂದೆ ಇದೇ ಬದಲಾವಣೆ ಹೆಜ್ಜೆಯಾಗಿ ಹೆಣ್ಣು ರಂಗಪ್ರವೇಶ ಮಾಡಿದ್ದು, ಸ್ತ್ರೀ ನಾಟಕ ಮಂಡಳಿ ಕಟ್ಟಿದ್ದು ಸಾಹಸದ ಕೆಲಸ. ಜೊತೆಗೆ ರಂಗಭೂಮಿಗೆ ಹೊಸ ಆಯಾಮವು ದೊರಕಿತು. ಆಧುನಿಕ ರಂಗದಲ್ಲಿ ಹೆಣ್ಣಿನ ಪಾಲ್ಗೊಳ್ಳುವಿಕೆ ಅಷ್ಟೊಂದು ಮುಕ್ತವಾಗಿದೆ ಎಂದು ಹೇಳುವಂತಿಲ್ಲ. ಹಿಂದೆ ಕಲೆ ವೃತ್ತಿ ಜೀವನಕ್ಕೆ ಆಧಾರವಾಗಿದ್ದರೆ, ಇಂದು ಅದು ಅಭಿರುಚಿಗೆ ಒಳಪಟ್ಟಿದೆ. ಮಹಿಳೆಯರಿಗೆ ಹೆಚ್ಚಿನ ತರಬೇತಿಗೆ ಅವಕಾಶ ಕಲ್ಪಿಸಿ ರಂಗಭೂಮಿಯತ್ತ ಮಹಿಳೆಯರು ಚಿತ್ತ ಹರಿಸುವಂತೆ ಸರಕಾರವು ಉತ್ತೇಜನ ನೀಡಬೇಕು ಎಂಬುವುದನ್ನು ಉಲ್ಲೇಖಿಸುತ್ತಾ, ರಂಗಭೂಮಿಯಲ್ಲಿ ಮಹಿಳೆಯರು ಅನುಭವಿಸಿದಂತಹ ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಜಿ. ಹೆಗಡೆ ಉಪಸ್ಥಿತರಿದ್ದರು. ಪೂಜಾ ಪಿ. ರಾವ್ ಅವರು ರಂಗಗೀತೆ ಹಾಡಿದರು. ಸವಿತಾ ನೆಲ್ಲಿ ನಿರೂಪಿಸಿದರು. ಆಶಾ ಮಹಾದೇವ



ಡಾ. ವೆಂಕಟಗಿರಿ ದಳವಾಯಿ

ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು. ತಾಂತ್ರಿಕ ನಿರ್ವಹಣೆಯನ್ನು ರಂಗಾಸಕ್ತರಾದ ಟಿ. ಎಸ್. ರಮೇಶ್ ಹಾಗೂ ಸಂತೋಷ ಕುಮಾರ ಉಪಾಧ್ಯಾಯ ನಿರ್ವಹಿಸಿದರು. ರಂಗಕರ್ಮಿ ದಿನಕರ ಫೌಂಡೇಶನ್‌ನ ಸಂಚಾಲಕ ಶಿವಾನಂದ ಇಂಗಳೇಶ್ವರ ಅವರ ಪರಿಕಲ್ಪನೆ ಮತ್ತು ಸಂಯೋಜನೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

*ಅರವಿಂದ ಬಿಜ್ಜೈ*

# ದೆಹಲಿ ಕನ್ನಡ ಶಾಲೆಗೆ ನಾಮಫಲಕ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಆಡಳಿತ ಮಂಡಳಿಯ ಕನ್ನಡದ ಕಾಳಜಿ, ಪ್ರಯತ್ನದ ಫಲವಾಗಿ ಪ್ರಪ್ರಥಮ ಬಾರಿಗೆ ದೆಹಲಿಯಲ್ಲಿ 'ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ' ಎಂಬ ಕನ್ನಡ ಭಾಷೆಯ ನಾಮಫಲಕವನ್ನು ಇತ್ತೀಚೆಗೆ ದೆಹಲಿ ಸರಕಾರದ ಎನ್.ಡಿ.ಎಂ.ಸಿ. ವತಿಯಿಂದ ಅನಾವರಣಗೊಳಿಸಲಾಯಿತು. ದೆಹಲಿಯ ಪ್ರತಿ ರಸ್ತೆಗಳಲ್ಲಿ ಬೇರೆ ಬೇರೆ ಭಾಷೆಗಳ ನಾಮಫಲಕವನ್ನು ಕಾಣುವ ಕನ್ನಡಿಗರಿಗೆ ಇನ್ನು ಮುಂದೆ ಲೋಧಿ ಎಸ್ಟೇಟ್‌ನಲ್ಲಿ ಕನ್ನಡ ಭಾಷೆಯ ನಾಮಫಲಕವನ್ನು ಕಾಣಬಹುದು. ಸುಮಾರು ಎರಡು ವರ್ಷಗಳಿಂದ ಹಿಂದೆ ದೆಹಲಿ ಕರ್ನಾಟಕದ ಸಂಘದ ಹತ್ತಿರದ ಮೆಟ್ರೊ ನಿಲ್ದಾಣಕ್ಕೆ ಸರ್. ಎಂ. ವಿಶ್ವೇಶ್ವರಯ್ಯ ನಾಮಕರಣದ ಪ್ರಯತ್ನವೂ ಅಂದಿನ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರದಾಗಿತ್ತು ಎಂಬುವುದು ಗಮನೀಯ.

ಅನಾವರಣಗೊಂಡ ಕನ್ನಡ ನಾಮಫಲಕದ ಕುರಿತು ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಇದು ಮಾಡಲೇಬೇಕಾದ ಕೆಲಸ. ನಮ್ಮ ಜವಾಬ್ದಾರಿ. ಆದರೆ ಇಂತಹ ಪ್ರತಿಷ್ಠಿತ ಜಾಗದಲ್ಲಿ ಎಸ್. ವಿ. ಕೃಷ್ಣಮೂರ್ತಿರಾವ್, ಡಾ. ಸರೋಜಿನಿ ಮಹಿಷಿ ಹಾಗೂ ಹಿರಿಯ ಕನ್ನಡಿಗರು ಕಟ್ಟಿದ ಈ ಕನ್ನಡ ಸಂಸ್ಥೆಯು ಮುಂದಿನ ದಿನಗಳಲ್ಲಿ ದೊಡ್ಡ ಸುದ್ದಿಯಾಗಿ ಮನ್ನಣೆ ಗಳಿಸಬೇಕಾಗಿದೆ ಎಂದು ಹೇಳಿದರು. ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್, ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಸಹಕಾರವನ್ನು ಸ್ಮರಿಸಿದರು.




# ರಂಗ ಸಂವಾದದಲ್ಲಿ ಪಿ. ಗಂಗಾಧರ ಸ್ವಾಮಿ

ಕೊರೊನ-19ರ ಮಹಾಮಾರಿಯ ಕಷ್ಟಕರ ಸಮಯದಲ್ಲೂ ಕೂಡ ರಂಗಭೂಮಿಯ ಕುರಿತು ಪರಿಣತರಿಂದ ವೆಬಿನಾರ್ ಮೂಲಕ ವಿಚಾರಗೋಷ್ಠಿಗಳನ್ನು 'ದಿನಕರ' ಆಯೋಜಿಸುತ್ತಲೇ ಬಂದಿದೆ.

'ದಿನಕರ' ಫೌಂಡೇಶನ್ ಮೂಲಕ ರಾಷ್ಟ್ರದ ರಾಜಧಾನಿಯಲ್ಲಿ ಕಳೆದ 15 ವರ್ಷಗಳಿಂದ 'ಬಸರಕೋಡ ಬಸ್ಸು', 'ನಾ ಸತ್ತಿಲ್ಲ', 'ಉರುಗವ್ವ', 'ಬಾಗಿಲು', 'ಇದು ಕಾರಣ', 'ಕಣ್ಣು', 'ರಕ್ತ ರಾತ್ರಿ', 'ಫಿಲ್ಟರ್ ಮರುಳಯ್ಯ ಇದು ಫಿಲ್ಟರ್ ಮರುಳೋ', 'ಪಾತ್ರಧಾರಿಣಿ', 'ಹಳ್ಳ ಕೊಳ್ಳ ನೀರು' ಮುಂತಾದ ಯಶಸ್ವಿ ನಾಟಕ ಪ್ರಯೋಗ ನೀಡಿದ ಶ್ರೇಯ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಹಾಗೂ ಉತ್ಸಾಹಿ ಕಲಾವಿದರಿಗೆ ಸಲ್ಲುತ್ತದೆ.

ದಿನಾಂಕ 22.11.2020ರಂದು ಝೂಮ್ ಮೀಟಿಂಗ್ ಮೂಲಕ 'ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ನಡೆದು ಬಂದ ದಾರಿ' ಸಂವಾದದಲ್ಲಿ ಮೈಸೂರಿನ ಹಿರಿಯ ರಂಗಕರ್ಮಿ ಪಿ. ಗಂಗಾಧರ ಸ್ವಾಮಿ ಅವರು ಭಾಗವಹಿಸಿ ತಮ್ಮ ವಿಚಾರಗಳನ್ನು ಅನುಭವದ ಮೂಲಕ ಹಂಚಿಕೊಂಡರು.

ವೃತ್ತಿ ರಂಗಭೂಮಿಯ ವಿಕಾಸದ ಕುರಿತು ಮಾತನಾಡಿದ ಅವರು ತಾವು ರಂಗಭೂಮಿಗೆ 1968ರಲ್ಲಿ ಗುಡಗೇರಿ ನಾಟಕ ಕಂಪನಿ ಮೂಲಕ ಪಾದಾರ್ಪಣೆ ಮಾಡಿ, ಎಂಟು ತಿಂಗಳ ಕಳೆದು ಮತ್ತೆ ಬೆಂಗಳೂರಿಗೆ ಹಿಂದಿರುಗಿ, ನಾಟಕದಲ್ಲಿ ಸ್ನಾತಕ ಪದವಿ ಪಡೆದುಕೊಂಡು ರಂಗಭೂಮಿಗೆ ಪೂರಕವಾದ ವಿಷಯಗಳನ್ನು ತಿಳಿದುಕೊಂಡು ವೃತ್ತಿ ರಂಗಭೂಮಿಯನ್ನೇ ಕಾರ್ಯಕ್ಷೇತ್ರ ಮಾಡಿಕೊಂಡೆ ಎಂದು ನುಡಿ ನುಡಿದು, ನಮ್ಮೆಲ್ಲರಿಗೂ ಪ್ರೇರಣೆಯಾದರು. ಅವರು ಜಾನಪದ ರಂಗಭೂಮಿ, ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯ ಸೆಳೆತ ಕುರಿತು ಸಹ ಮಾತನಾಡಿದರು. ಭಾರತದಲ್ಲಿ ಬ್ರಿಟೀಷರ ಆಗಮನದ ನಂತರ ರಂಗಭೂಮಿ ಹರವು ಹೆಚ್ಚಾಯಿತು ಎಂದ ಅವರು ಮೊದಲು ಜಾನಪದ ಮತ್ತಿತರ ರಂಗಭೂಮಿ ಪ್ರಕಾರಗಳು ಪ್ರಚಲಿತದಲ್ಲಿ ಇದ್ದವು ಎಂದರು.

ಸಾಹಿತ್ಯಿಕ ಸತ್ವವುಳ್ಳ ಅಭಿನಯ ಪ್ರಧಾನ ನಾಟಕಗಳನ್ನು ರಚಿಸಿ ರಂಗಭೂಮಿಗೆ ಹೊಸ ಆಯಾಮ ನೀಡಲಾಯಿತು. ಪೌರಾಣಿಕ, ಸಾಮಾಜಿಕ ನಾಟಕಗಳು ಪ್ರಸಿದ್ಧಿ ಪಡೆದವು. ವೃತ್ತಿ ರಂಗಭೂಮಿ ನಾಟಕಗಳು ಜನಜಾಗೃತಿಯುಳ್ಳ ಮಾನವೀಯ ಮೌಲ್ಯಗಳ ಪುನರುತ್ಥಾನ ತಳಹದಿಯಾಯಿತು ಎಂದರು. ವೈವಿಧ್ಯತೆಯನ್ನು ಕಾಪಾಡಿಕೊಂಡು ರಂಜನೆ ನೀಡಿದ ಶ್ರೇಯ ವೃತ್ತಿ ನಾಟಕಗಳಿಗೆ ಸಲ್ಲುತ್ತದೆ. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಸ್ತುಗಳನ್ನು ವೃತ್ತಿ ನಾಟಕಗಳು ಒಳಗೊಂಡಿದ್ದವು. ವೃತ್ತಿ ನಾಟಕ ಪರಂಪರೆ ಆರಂಭಿಕ ದೆಸೆಯಿಂದ ಇಂದಿನವರೆಗೆ ರಂಗ ಸಂಸ್ಕೃತಿಯನ್ನು ಬೆಳೆಸಿ ಉಳಿಸಿದ ಪರಿ ನಿಜಕ್ಕೂ ಅದ್ಭುತ ಎಂದರು. ಕನ್ನಡ ವೃತ್ತಿ ನಾಟಕ ಪರಂಪರೆಗೆ ಮಹನೀಯರು ಕೊಡುಗೆಗಳನ್ನು ಸ್ಮರಿಸಿದರು.

ರಂಗಾಸಕ್ತರಿಗೆ ಸದಭಿರುಚಿಯ ವಿಚಾರಗಳನ್ನು ತಿಳಿಸಿಕೊಡುವ 'ದಿನಕರ' ಬೆಳೆಯಲಿ ಹಾಗು ಬೆಳಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿದರು. ಕಲಾವಿದರು ಮಾಶಾಸನ ಮತ್ತಿತರ ಸೌಕರ್ಯ ಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ತಮ್ಮ ವೃತ್ತಿ ಜೀವನದ ಅವಶ್ಯಕ ದಾಖಲೆಗಳನ್ನು ತಮ್ಮಲ್ಲಿ ಸಂರಕ್ಷಿಸಿಟ್ಟುಕೊಳ್ಳಬೇಕು ಎಂದು ಕಳಕಳಿ ವ್ಯಕ್ತಪಡಿಸಿದರು. ಗಂಗಾಧರ ಸ್ವಾಮಿ ಅವರ ಅವರ ಅಮೂಲ್ಯ ನುಡಿಗಳನ್ನು ಕೇಳಿಸಿಕೊಂಡು ಸಂತೋಷವಾಯಿತು ಎಂದರು. 'ದಿನಕರ'ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಸಲಹೆ ಸೂಚನೆ ನೀಡುತ್ತಾ ಮುನ್ನಡೆಯಲು ಡಾ. ವೆಂಕಟಾಚಲ ಹೆಗಡೆ ಅವರು ಪ್ರೇರಣೆ ನೀಡಿ ಮೆಚ್ಚುಗೆ ಮಾತನಾಡಿ ತಮ್ಮ ಅನಿಸಿಕೆ ಹಂಚಿಕೊಂಡರು.



ಪಿ. ಗಂಗಾಧರ ಸ್ವಾಮಿ

ವೃತ್ತಿ ರಂಗಭೂಮಿ ವಿಕಾಸ ಹಾಗೂ ಬೆಳೆದು ಬಂದ ಬಗೆ ಹಾಗೂ ವೃತ್ತಿ ರಂಗಭೂಮಿ, ಹವ್ಯಾಸಿ ರಂಗ ಭೂಮಿ ವಿಭಾಗೀಕರಣ,ಇವರೆಡರ ಆರೋಗ್ಯಪೂರ್ಣ ಸಂಬಂಧ, ಇನ್ನೂ ಹಲವು ಪ್ರಶ್ನೆ ಕೇಳುವುದರ ಮೂಲಕ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಸಂವಾದ ಸುಲಲಿತವಾಗಿ ಸಾಗಲು ಕಾರಣೀಕರ್ತರಾದರು.

ವಿದೂಷಿ ಶಶಿಕಲಾ ದಾನಿ, ಹುಬ್ಬಳ್ಳಿ ಅವರ ಜಲತರಂಗ ವಾದನ ಕೇಳುಗರನ್ನು ಮಂತ್ರಮುಗ್ಧಗೊಳಿಸಿತು. ಸಂತೋಷ ಕುಮಾರ್ ಉಪಾಧ್ಯಾಯ ನಿರೂಪಿಸಿದರು. ತಾಂತ್ರಿಕ ನಿರ್ವಹಣೆಯಲ್ಲಿ ಟೊಂಕ ಕಟ್ಟಿ ನಿಂತು ನಿರ್ವಹಿಸುವ ರಮೇಶ ಟಿ.ಎಸ್ ಅವರ ಶ್ರಮ ಶ್ಲಾಘನೀಯ. ಶಿವಾನಂದ ಇಂಗಳೇಶ್ವರ ಅವರು ವಂದಿಸಿದರು.

ಸಂವಾದದಲ್ಲಿ ಮಂಡ್ಯದ ಶಂಕರೇಗೌಡರಿಂದ ರಚಿತ 'ಪಾದುಕಾ ಕಿರೀಟ' ನಾಟಕದ ನಾಂದಿ ಪದ್ಯ ಹಾಗೂ ರಸ ಋಷಿ ಕಾವ್ಯದ ನಾಟಕ ರಂಗದೀ..., 'ಕಾಲಪಟ ಉರುಳುವುದು' ಹಾಗೂ ಕೃಪಾಳು ರಾಮಚಂದ್ರ, ಅಪಾರ ಸುಗುಣ ಸಾಂದ್ರ. ಎಂಬ ರಂಗಗೀತೆ ಸಂವಾದಕ್ಕೆ ಮೆರುಗು ನೀಡಿತು. ಭಾಗವಹಿಸಿದ ಕಲಾಸಕ್ತರು ಮುಕ್ತ ಕಂಠದಿಂದ ಪ್ರಶಂಸಿಸಿದರು.

***ಅಮರೇಶ್***

# ಸಾಮಾಜಿಕ ಸುಧಾರಣಾ ದಿನಾಚರಣೆ

ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ವತಿಯಿಂದ ದಿನಾಂಕ 11.12.2020ರಂದು 31ನೇಯ ಸಾಮಾಜಿಕ ಸುಧಾರಣಾ ದಿನಾಚರಣೆಯನ್ನು ಆಚರಿಸಲಾಯಿತು. ಕೋವಿಡ್ ಕಾರಣದಿಂದ ಸಾಮಾಜಿಕ ಅಂತರವನ್ನು ಕಾಪಾಡಲು ಆನ್‌ಲೈನ್ ಕಾರ್ಯಕ್ರಮ ನಡೆಸಲಾಯಿತು.


ಮಕ್ಕಳಾದ ಓಶೋ ಹಾಗೂ ಓಶಿನ್ ಮುರಗೋಡರು ದೀಪಾರಾಧನೆ ಹಾಗೂ ಪ್ರಾರ್ಥನೆಯಿಂದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಿ.ವಿ. ಬಿರಾದಾರ್ ಅವರು ಸ್ವಾಗತಿಸಿದರು. ತಮ್ಮ ಆತ್ಮೀಯ ಗೆಳೆಯರಾದ ದಿ. ಈಶ್ವರಪ್ಪ ಹಾಗೂ ದಿ. ಭೀಮರಾವ್ ಮುರಗೋಡರನ್ನು ಅಂತರರಾಷ್ಟ್ರೀಯ ಖ್ಯಾತ ಕಲಾವಿದರೆಂದು ನೆನೆಸಿಕೊಂಡರು. ಅಲ್ಲದೆ ಸಂಗೀತಕಾರರು ಕವಿಗಳು, ನಾಟಕಕಾರರು, ಸಿನಿಮಾ ನಟರು, ಸಾಮಾಜಿಕ ಸುಧಾರಕರಾಗಿದ್ದರೆಂದು ತಿಳಿಸಿದರು. ತಮ್ಮ ತೈಲಚಿತ್ರದ ಮುಖಾಂತರ ದೇಶ ವಿದೇಶಗಳ ಶ್ರೇಷ್ಠ ರಾಜಕೀಯ ವ್ಯಕ್ತಿಗಳ ಧಾರ್ಮಿಕ, ಸಾಮಾಜಿಕ ಸಂಗೀತ ಹೀಗೆ ಅನೇಕ ಗಣ್ಯರ 500ಕ್ಕೂ ಹೆಚ್ಚು ತೈಲ ಚಿತ್ರಗಳನ್ನು ರಚಿಸಿದ ದಿ. ಭೀಮರಾವ್ ಮುರಗೋಡರು ಉತ್ತುಂಗ ಶಿಖರದ ಮೇರು ಪರ್ವತವಾಗಿದ್ದರೆಂದು ವರ್ಣಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿದರು. ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಕಾರ್ಯವೈಖರಿಯನ್ನು ಮೆಚ್ಚಿಕೊಂಡು ಮಾತನಾಡುತ್ತ ಸಮಾಜ ಸುಧಾರಕರಾದ ದಿ. ಈಶ್ವರಪ್ಪ ಹಾಗೂ ದಿ. ಭೀಮರಾವ್ ಮುರಗೋಡ ಅವರ ಸರಳತನ, ಮುಗುಳ್ನಗೆ ಅವರು ಕರ್ನಾಟಕದ ಸಂಪತ್ತು ಮಾತ್ರವಲ್ಲ ದೇಶದ ಸಂಪತ್ತು ಆಗಿದ್ದರೆಂದು ನೆನೆಸಿದರು. ದಿನಕ್ಕೆ 18ಗಂಟೆ ಕೆಲಸ ಮಾಡುತ್ತಿದ್ದ ಇವರು ಶ್ರಮಜೀವಿಯಾಗಿದ್ದರೆಂದು ಹೇಳಿದರು.

ಮುರಗೋಡರು ತಮ್ಮ ಹುಟ್ಟುಹಬ್ಬ ಮಕ್ಕಳ ದಿನಾಚರಣೆ, ಕುಷ್ಠ ರೋಗಿಗಳಿಗೆ ಸೇವೆ ಮಾಡುವ ಮೂಲಕ ಆಚರಿಸಿಕೊಳ್ಳುತ್ತಿದ್ದರು. 1976ರಿಂದಲೇ ಮುರಗೋಡ ಅವರು ರಾಜಧಾನಿ ದೆಹಲಿಯಲ್ಲಿ ಕರ್ನಾಟಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡು ಮೆಚ್ಚುವಂತಹ ಕಾರ್ಯ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಹಾಗೂ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ನಿವೃತ್ತ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, ನಾವು ದಿ. ಈಶ್ವರಪ್ಪ ಹಾಗೂ ಭೀಮರಾವ್ ಮುರಗೋಡರನ್ನು ನೆನಪಿಸುತ್ತಿದ್ದೇವೆ ಹಾಗೂ ಈ ದಿನ ಇಂಟರ್‌ನ್ಯಾಷನಲ್ ಗರ್ಲ್ಸ್ ಚೈಲ್ಡ್ ಡೇ ಇದೆ ಎಂದು ಹೇಳಿದರು. ಈ ಸಮಯದಲ್ಲಿ ಭಾರತದಲ್ಲಿ




ನಾವೆಲ್ಲರೂ ಸೋಶಿಯಲ್ ರಿಫೋರ್ಮರ್ಸ್‌ಗೋಸ್ಕರ ಕೂಡಿ ಕೆಲಸ ಮಾಡಬೇಕೆಂದು ಹೇಳಿದರು. 12ನೇ ಶತಮಾನದಲ್ಲಿ ಬಸವಣ್ಣನವರು, 20ನೇ ಶತಮಾನದಲ್ಲಿ ಅಂಬೇಡ್ಕರರು, ಅದಕ್ಕೂ ಹಿಂದೆ ಬುದ್ಧ ಮಾಡಿದ್ದರು. ಇವರು ಆನಂದ ಮುರಗೋಡರು ಹಾಗೂ ಅವರ ಪರಿವಾರದ ಸಮಾಜ ಕಾರ್ಯ ಆಸಕ್ತಿಯನ್ನು ಮೆಚ್ಚಿಕೊಂಡರು.

ದಿ. ಈಶ್ವರಪ್ಪ ಮುರಗೋಡರು ಗಾಂಧಿ ಫಿಲಾಸಫೀ ಬಗ್ಗೆ ಹಲವು ಚಿತ್ರಗಳನ್ನು ಮಾಡಿದ್ದರೆಂದು ನನ್ನ ಗೆಳೆಯನಿಂದ ನಾನು ಆಗ ಕೇಳಿದ್ದೆ. ದಿ. ಭೀಮರಾವ್ ಮುರಗೋಡರು ನನ್ನ ಜೊತೆ ಉಪಾಧ್ಯಕ್ಷ ಆಗಿ ಕೆಲಸ ಮಾಡಿದ್ದರು. ಅವರನ್ನು ನೋಡಿದರೆ ನನಗೆ ನನ್ನ ತಂದೆಯ ನೆನಪಾಗುತ್ತಿತ್ತು ಎಂದು ನೆನಪು ಮಾಡಿದರು. ಬೆಂಗಳೂರಿನಲ್ಲಿ ಭೀಮರಾವ್ ಮುರಗೋಡರ ಮನೆಯನ್ನು ಕಂಡು ಬಹಳ ಮೆಚ್ಚಿಕೊಂಡಿದ್ದರು.

ಡಾ. ಅಹಲ್ಯಾಚಿಂತಾಮಣಿಯವರು ದೆಹಲಿಯಿಂದ ಮಾತನಾಡಿದರು. ಸಂಸ್ಥೆಯ ಆಜೀವ ಸದಸ್ಯರಾಗಿದ್ದು ಕಳೆದ 30 ವರ್ಷಗಳಿಂದ ಸಕ್ರಿಯವಾಗಿ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ರಂಗಕುಂಚಗಳ ಬಾಳನ್ನು ರಚಿಸಿಕೊಂಡು ಗೋಕುಲದಂತಹ ಸಂಸಾರದಲ್ಲಿ ಮುಕ್ತ ಮನಸ್ಸಿನಿಂದ ಆಡುತ್ತಾ ಜೀವನವನ್ನು ಸಮಾಧಾನಕರವಾಗಿ ನಡೆಸಿದ ಮುರಗೋಡ ಸಹೋದರರನ್ನು ಅವರು ನೆನೆದರು. ಮನೆತನ, ಸಂಸಾರ, ಸಂಸ್ಕಾರ, ಸಂಪ್ರದಾಯ, ಆಪ್ತರು, ಮಿತ್ರರು, ಅವರುಗಳ ವಿಶಿಷ್ಠತೆಗೆ ತಲೆಬಾಗಿ ನಡೆದ ಮುರಗೋಡರನ್ನು ನೆನೆಸಿದರು.

ಫಕೀರಪ್ಪ ಮುರಗೋಡರ ವಂಶವೃಕ್ಷದಲ್ಲಿ ನಡೆದ ಬಂದ ಈಶ್ವರಪ್ಪ ಹಾಗೂ ಭೀಮರಾವ್ ಮುರಗೋಡರ ಅನುಬಂಧ ಸಂಬಂಧ ಬಹಳ ವಿಶಿಷ್ಟವಾದದ್ದು ಎಂದು ಅವರ ಕಾರ್ಯವೈಖರಿಯನ್ನು ಮೆಚ್ಚಿಕೊಂಡರು.

ಡಾ. ಯೋಗೇಶನ್ ಗದಗ್‌ನಿಂದ ಮಾತನಾಡಿ, ಮುರಗೋಡ ಸಹೋದರರು ಶರಣರಾಗಿದ್ದರು. ಇವರ ತಂದೆ ಫಕೀರಪ್ಪ ಮುರಗೋಡರು ಬಸವಣ್ಣನವರ 'ಕಾಯಕವೇ ಕೈಲಾಸ'ದಂತೆ ತಮ್ಮ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳು ಶಾಂತವೀರಪ್ಪನವರು ಬೆಂಗಳೂರಿನಲ್ಲಿದ್ದರು. ಈಶ್ವರಪ್ಪ ಮುರಗೋಡರ ಪರಿಚಯ 45 ವರ್ಷಗಳ ಹಿಂದೆ ಹಾವೇರಿಯ ಶರಣರ ಬಳಗದಲ್ಲಿ ಪರಿಚಯವಾಯಿತು, ದೆಹಲಿಯಲ್ಲಿದ್ದುಕೊಂಡು ಬಸವಣ್ಣನವರ ಬಗ್ಗೆ ಕೆಲಸ ಮಾಡುತ್ತಿರುವುದು ಕಂಡು ಅಚ್ಚರಿ ಮೂಡಿಸಿತ್ತು. ಅವರು ತಮ್ಮ ಮಕ್ಕಳ, ಮೊಮ್ಮಕ್ಕಳ ಜನ್ಮದಿನವನ್ನು ದೆಹಲಿಯ ಕುಷ್ಟರೋಗಿ ಕಾಲೋನಿಯಲ್ಲಿ ಆಚರಿಸುವುದನ್ನು ಕಣ್ಣಾರೆ ಕಂಡದ್ದನ್ನು ನೆನೆದರು. ಡಾ. ಯೋಗೇಶನ್ ಅವರು ಮುರಗೋಡರ ಆಪ್ತರಾಗಿದ್ದು ಕರ್ನಾಟಕದಲ್ಲಿ ಶರಣರ ಬಳಗದಲ್ಲಿ ಸಕ್ರಿಯವಾಗಿ ಕಾರ್ಯ ನಡೆಸಿಕೊಂಡು ಬರುತ್ತಿದ್ದಾರೆ.

ಪೀಟರ್ ಕೆ. ವಿಲ್‌ಫ್ರೆಡ್ ಅವರು ಹುಬ್ಬಳ್ಳಿಯಿಂದ ಮಾತನಾಡಿ, ಸೋಶಿಯಲ್ ರಿಫೋರ್ಮರ್ಸ್ ಡೇ ಆಯೋಜನೆಯು ಸಮಾಜ ಕಾರ್ಯಗಳನ್ನು ನಡೆಸುತ್ತಿರುವುದು ಬಹಳ ಖುಷಿಯನ್ನು ತಂದಿದೆ. ಸಮಾಜದಲ್ಲಿ ಜಾತೀಯತೆ ದೂರ ಮಾಡಿ ನಾವೆಲ್ಲರೂ ಒಂದೇ ಎಂಬ ಭಾವನೆಯು

ಪ್ರತಿಯೊಬ್ಬರಿಗೂ ಇರಬೇಕೆಂದು ಎಚ್ಚರಿಸಿದರು. ಶಾಂತಿ ಮತ್ತು ಪ್ರೀತಿಯು ಸಮಾಜದಲ್ಲಿ ಪಸರಿಸಬೇಕೆಂದು ಹೇಳಿದರು. ನಾವು ಸಮಾಜದಲ್ಲಿ ಬಿತ್ತಿದ ಬೀಜವೇ ಹೆಮ್ಮರವಾಗಿ ನೂರಾರು ಜನರಿಗೆ ಆಶ್ರಯವಾಗಬೇಕೆಂದು ಹೇಳಿದರು.

ಆಚಾರ್ಯ ಡಾ. ಸಾಧ್ವಿ ಸಾಧನಜೀ ದೆಹಲಿಯ ಸುಶೀಲ್ ಮುನಿ ಆಶ್ರಮದಿಂದ ಮಾತನಾಡಿ, ತಮ್ಮ ಆಶೀರ್ವಚನದಲ್ಲಿ ಎಲ್ಲಾ ಜಾತಿ ಧರ್ಮದವರನ್ನು ಒಗ್ಗೂಡಿಸಿ, ಸಮಾಜ ಸೇವೆಯ ಮುತುವರ್ಜಿಯನ್ನು ತೋರಿಸುತ್ತಿರುವುದು ಕಂಡು ಸಂತೋಷ ವ್ಯಕ್ತಪಡಿಸಿದರು.

ಪೂಜ್ಯ ಶ್ರೀ ಡಾ. ಮಹಾಂತ ಸ್ವಾಮೀಜಿ ಶ್ರೀ ಜಗದ್ಗುರು ತೋಟಂದಾರಿ ಶಾಖೆ, ನವದೆಹಲಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ವಾಮೀಜಿಯವರು ಮುರಗೋಡ ಸಹೋದರರು ಬಸವ ತತ್ವಗಳನ್ನು ಅನುಸರಿಸಿ ಪ್ರಪ್ರಥಮ ಬಾರಿಗೆ ಬಸವ ತತ್ವಗಳನ್ನು ದೆಹಲಿಯಲ್ಲಿ ಪಸರಿಸಿದ ಕೀರ್ತಿ ಪಡೆದಿದ್ದಾರೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಇವರು ಬುದ್ಧ, ಬಸವ ಹಾಗೂ ಬಾಬಾಸಾಹೇಬರ ಪಥದಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದಾರೆ. ಈಶ್ವರಪ್ಪ ಮುರಗೋಡರು ಮೊದಲು ದೆಹಲಿಗೆ ಬಂದು ನಂತರ ತಮ್ಮ ಭೀಮರಾವ್‌ರನ್ನು ದೆಹಲಿಗೆ ಕರೆಸಿಕೊಂಡರು. ಮುರಗೋಡ ಸಹೋದರರ ಜೀವನ ಒಂದು ಹೂವಿನ ತರಹ ಆಗಿತ್ತು. ಸಮಾಜದ ದೀನದಲಿತರ ಕಾರ್ಯ ಮಾಡುತ್ತಾ ಸುವಾಸನೆಯನ್ನು ಸಮಾಜದಲ್ಲಿ ಹರಡಬೇಕೆಂದು ಪಣ ತೊಟ್ಟಿದ್ದರು.

ದೆಹಲಿಯ ಬುದ್ಧಾಚಾರ್ಯಚಂದ್ರ ಸೇನ್ ಬೌದ್ಧ್‌ರವರು ಮಾತನಾಡಿ, ಮುರಗೋಡ ಸಹೋದರರು ದೆಹಲಿಗೆ ಬಂದಾಗಿನಿಂದ ಪರಿಚಯವಾಗಿದ್ದು, ಡಾ. ಜ್ಞಾನ ರತ್ನ ಭಂತೆಜಿಯವರು ಇವರ ಪರಿಚಯ ಮಾಡಿಕೊಟ್ಟರು. ಮುರಗೋಡ ಸಹೋದರರು ಮೂರ್ತಿ ಪೂಜನೆ ಮಾಡುತ್ತಿರಲಿಲ್ಲ. ಇವರು ಬುದ್ಧ, ಬಸವ ಹಾಗೂ ಬಾಬಾಸಾಹೇಬರ ಪಥದಲ್ಲಿ ನಡೆದ ಮಾನವತಾವಾದಿಗಳಾಗಿದ್ದರೆಂದು ನೆನೆದರು. ಕನಾಟಕದ ಹಾಗೂ ದೆಹಲಿಯಲ್ಲಿ ನಡೆಸುತ್ತಿದ್ದ ಶರಣರ ಸಪ್ತಾಹದಲ್ಲಿ ಭಾಗವಹಿಸುತ್ತಿದ್ದನ್ನು ನೆನೆದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ. ಸುರೇಖಾ ಹಾಗೂ ಪ್ರಶಾಂತ್‌ರವರು ಕೋವಿಡ್ ವಾರಿಯರ್ ಆಗಿ ಮಾಸ್ಕನ್ನು ಜನರಿಗೆ ಹಂಚಿ, ಐ.ಸಿ.ಯು. ಬೆಡ್‌ಗಳ ವ್ಯವಸ್ಥೆ ಮಾಡಿದ್ದರು. ಕಳೆದ 8 ತಿಂಗಳುಗಳಿಂದ ಹಗಲು ರಾತ್ರಿ ದುಡಿಯುತ್ತಿರುವ ಇವರಿಬ್ಬರಿಗೆ ಸಂಸ್ಥೆಯು ಸನ್ಮಾನಿಸಿತು. ಪ್ರತಿಯೊಬ್ಬರು ಸಮಾಜದಲ್ಲಿನ ದೀನ ದಲಿತರ ಸೇವೆ ಮಾಡಲು ಮುಂದೆ ಬರಬೇಕೆಂದು ಇಚ್ಛೆ ವ್ಯಕ್ತಪಡಿಸಿದರು.

ಬೆಂಗಳೂರಿನ ಗೀತಾ ಹಾಗೂ ಮಗಳು ಶ್ರದ್ಧಾ ಬೆಣಗಿಯವರು ಸ್ವತಃ ಸಾಹಿತ್ಯ ಹಾಗೂ ನೃತ್ಯ ಸಂಯೋಜಿಸಿ ಸರ್ವ ಧರ್ಮ ಸಮನ್ವಯ ಬಿಂಬಿಸುವ ನೃತ್ಯ ಗಾಯನ ಪ್ರಸ್ತುತಪಡಿಸಿದರು.

ಹುಬ್ಬಳ್ಳಿಯ ರಾಮಕುಮಾರ್ ಶಿಂಧೆ ಹಾಗೂ ವಿನಯ್ ಶಿಂಧೆಯವರು ಬಸವ ವಚನಗಳನ್ನು ಹಾಡಿದರು.

ಹಬ್ಬಳ್ಳಿಯ ಕರುಣಾ ಮುರಗೋಡರು ಸುಮಧುರ ಕಂಠದಿಂದ ಸದ್ಭಾವನೆ ಕುರಿತ ಗಾಯನ ನೀಡಿದರು. ಡಾ. ಮಂಜುನಾಥ ಹಾಗೂ ಲಲಿತಾ ಗೋಸಾಲ್ ಅವರು ಭಾಗವಹಿಸಿದ್ದರು.

ಸಂಸ್ಥೆಯು 31ನೇ ವರ್ಷದಿಂದ ತನ್ನ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಇದೇ ರೀತಿಯಲ್ಲಿ ಸಂಘ ಸಂಸ್ಥೆಯು ತನ್ನ ಕಾರ್ಯ ನಡೆಸಲು ಎಲ್ಲರೂ ಅಭಯ ಹಸ್ತ ನೀಡಬೇಕಾಗಿ ಶ್ರೀಮತಿ ಶಾಲನ್ ಮುರಗೋಡ ಅವರು ಆಶಿಸಿದರು. ಶ್ರೀಮತಿ ಸುಮಿತಾ ಮುರಗೋಡ ಕಾರ್ಯಕ್ರಮ ನಿರೂಪಿಸಿದರು.ಆನಂದ ಮುರಗೋಡ ಅವರು ವಂದಿಸಿದರು.

**ಸುಮಿತಾ ಮುರಗೋಡ**

# ಗುರುಗ್ರಾಮ ಕನ್ನಡ ಸಂಘದಲ್ಲಿ ರಾಜ್ಯೋತ್ಸವ




ಗುರುಗ್ರಾಮ ಕನ್ನಡ ಸಂಘದಿಂದ ಕೊರೊನ ಮಹಾಮಾರಿಯ ಕಾರಣದಿಂದ ಸರಳವಾಗಿ, ಸಾಂಪ್ರದಾಯಿಕವಾಗಿ ಸುರಕ್ಷತೆಯಿಂದ ಸಂಘದ ಕಾರ್ಯಕಾರಿಣಿ ಸದಸ್ಯರು ಮತ್ತು ಪಧಾದಿಕಾರಿಗಳು ಮಾತ್ರ ಸೇರಿ ದಿನಾಂಕ 29.11.2020ರಂದು ರಾಜ್ಯೋತ್ಸವ ಆಚರಿಸಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ವಿವಿಧ ಪ್ರದೇಶಗಳಲ್ಲಿ ಹಂಚಿ ಹೋಗಿದ್ದ ನಾವುಗಳು, ನಮ್ಮ ಹಿರಿಯರು ನಡೆಸಿದ ನಿಸ್ವಾರ್ಥ, ಹೋರಾಟದ ಫಲವಾಗಿ ಕನ್ನಡ ಮಾತಾನಾಡುವ ಎಲ್ಲ ಪ್ರದೇಶಗಳನ್ನು ಒಟ್ಟು ಗೂಡಿಸಿ ಕ್ರಿ.ಶ. 1956, ನವಂಬರ್ 1 ರಂದು ಮೈಸೂರು ರಾಜ್ಯದ ಉಗಮವಾಯಿತು. ಅದನ್ನು 1973ರ ನವಂಬರ್ 1ರಂದು ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ಅಂದಿನಿಂದ ಇಂದಿನವರೆಗೂ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಗುರುಗಾಂವ್ ಕನ್ನಡ ಸಂಘದಿಂದ ರಾಜ್ಯೋತ್ಸವ ನಾಡಹಬ್ಬವನ್ನು ಪ್ರತಿ ವರ್ಷ ಸಡಗರ, ಸಂಭ್ರಮ ಮತ್ತು ಸಂತೋಷದಿಂದ ಅದ್ದುರಿಯಾಗಿ ಆಚರಣೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಕೊರಾನ ಮಹಾಮಾರಿಯ ಕಾರಣದಿಂದ ಸರಳವಾಗಿ ರಾಧಾ ಕೃಷ್ಣ ಮಂದಿರ್ ಗುರುಗಾಂವ್‌ದಲ್ಲಿ ಆಚರಿಸಲಾಯಿತು.

**ಕೃಷ್ಣಪ್ಪ ಎಂ.**

# ಶ್ರದ್ಧಾಂಜಲಿ

## ಬಿ.ಆರ್. ಮಹಾಲಿಂಗಪ್ಪ ನಿಧನ



ದೆಹಲಿಯ ಕರ್ನಾಟಕ ಭವನದಲ್ಲಿ ವ್ಯವಸ್ಥಾಪಕರಾಗಿದ್ದ ಶ್ರೀ ಬಿ.ಆರ್. ಮಹಾಲಿಂಗಪ್ಪ ಅವರು ದಿನಾಂಕ 18.11.2020ರಂದು ನಿಧನರಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ಅವರು 2008-10ರ ಅವಧಿಯಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಅಗಲಿದ ಬಿ.ಆರ್. ಮಹಾಲಿಂಗಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ಒಂದು ದಿನ..



ಹೌದು! ಒಂದು ದಿನ ಅಂದರೆ
ಇಪ್ಪತ್ನಾಲ್ಕು ತಾಸು ಅಷ್ಟೆ ಬೆಳಗ್ಗೆ
ಯಿಂದ ಸಂಜೆವರೆಗೆ ಮತ್ತೆ
ರಾತ್ರಿ ಮರಳ ಮುಂಜಾನೇಯ ತನಕ

ಹೀಗೆ ದಿನಗಳು ಉರುಳುತ್ತಾ
ಕಾಲ ಕಳೆಯುತ್ತಾ ಜೀವನ
ಸಾಗುತ್ತಲೇ ಇರುತ್ತದೆ ಪ್ರತಿ ವರ್ಷ
ಹೊಸ ವರ್ಷದ ಆರಂಭದಿಂದ

ಹಬ್ಬ ಹರಿದಿನಗಳು ಜಯಂತಿ
ಪುಣ್ಯ ತಿಥಿಗಳು ಅಂತರಾಷ್ಟ್ರೀಯ
ದಿನಗಳು ಮಳೆ, ಚಳಿ, ಶಕೆಗಾಲಗಳು
ಎಲ್ಲವೂ ಒಂದರ ಹಿಂದೊಂದು ಬಂದು ಹೋಗುತ್ತವೆ

ಹುಟ್ಟಿ, ಅಂಬೆಗಾಲಿಕ್ಕಿ, ಅಮ್ಮಾ ಎಂದು
ಕರೆದು ಮಾತುಕತೆ ಕಲಿತು
ಜಗತ್ತಿನ ಆಗು ಹೋಗುಗಳನು
ಅನುಭವಿಸುತ್ತಾ ಕಾಲ ಮುಗಿಯುತ್ತದೆ

ಅದೊಂದು ದಿನ ನಮಗೆ ಅರಿವಿಲ್ಲದೇ
ನಾವು ಕಳೆದ ದಿನಗಳ ಲೆಕ್ಕ ತಿಳಿಯದೆ
ಅದೇನೆಲ್ಲಾ ಮಾಡಬೇಕೆಂದುಕೊಂಡಿದ್ದೆವೋ
ಎಲ್ಲಾ ಇಲ್ಲೇ ಬಿಟ್ಟು ನಡೆದು ಬಿಡುತ್ತೇವೆ.

ಸಖಾರಾಮ ಉಪ್ಪೂರು

## ಯಾರೂ ನಮ್ಮವರಲ್ಲ



ನಮಗೆ ನಾವೇ ಯಾರೂ ನಮ್ಮವರಲ್ಲ
ಎಲ್ಲರೂ ಅವರವರಿಗಾಗಿ ಬದುಕುವ
ಸ್ವತಂತ್ರ ಜೀವಿಗಳು ಆತ್ಮಗಳು
ಅವರವರಿಗೆ ಅವರವರದ್ದೇ ಆದ ಜೀವನ

ಈ ಮಧ್ಯೆ ಅಲ್ಲೆಲ್ಲೋ ಒಂದಿಷ್ಟು
ಕೊಡುಕೊಳ್ಳುವಿಕೆ ಕಸಿದುಕೊಳ್ಳುವಿಕೆ
ಜಗಳ-ಬಡಿದಾಟ ಪ್ರೀತಿ-ಪ್ರೇಮ
ಹಸಿವು-ನೋವು ನಲಿವು ಒಡನಾಟ

ಯಾರಿಗೆ ಯಾರೂ ಇಲ್ಲ ಯಾವ ಸಂಬಂಧವೂ
ಇಲ್ಲ ನೆಪ ಮಾತ್ರ ಮರೀಚಿಕೆಗಳಂತೆ
ಅಣ್ಣ-ತಂಗಿ ಗಂಡ-ಹೆಂಡತಿ ತಂದೆ-ತಾಯಿ
ಯಾವುದೂ ನಮ್ಮ ಆಯ್ಕೆ ಅಲ್ಲ ಕೊಡಲ್ಪಟ್ಟದ್ದು

ಹೋರಾಟ-ಸಂಘರ್ಷ ಎಲ್ಲವೂ ನಮ್ಮ ಭ್ರಮೆ
ಸ್ವಾರ್ಥ ಏನೋ ಸರಿ ಮಾಡಿ ಬಿಡುತ್ತೇವೆ
ಸಾಧಿಸಿ ಬಿಡುತ್ತೇವೆ ಎಂದು ಹಾಗಂತ
ಆಗುವುದೆಲ್ಲಾ ಆಗಿಯೇ ಹೋಗುತ್ತದೆ ಅದರಷ್ಟಕ್ಕೆ

ನಾವು ಅವರು ಇಲ್ಲ ಪ್ರಾಸಂಗಿಕ ಪ್ರಸ್ತುತ
ಅಲ್ಲ ಬಿಸಿಲು-ನೆರಳನಂತೆ ಒಂದರ
ಹಿಂದೆ ಇನ್ನೊಂದು ಅನಿವಾರ್ಯ
ಸ್ವಾಭಾವಿಕ ಕ್ರಿಯೆಗಳದ್ದಂತೆ ಮಾಮೂಲು

ಸಖಾರಾಮ ಉಪ್ಪೂರು

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು-ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
Dec-2020, Vol. No.31, Issue No. 3, Price Rs.1/-
RNI Regn. No. 53405/91, DL-SW-1/4016/19-21
Date of Publication : Dec 8th / 9th, Posting Date : 10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದ ಜಿ.ಎಸ್. ಪಾಟೀಲ್ ಅವರ ಕಲಾಕೃತಿ

